ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ

ನಲಿಕಲಿ

ಅಭ್ಯಾಸ ಸಹಿತ ಪಠ್ಯ ಪುಸ್ತಕ

ಕನ್ನಡ

ಭಾಗ – 2

2

ಎರಡನೇ ತರಗತಿ

@KTBS NOT TO BE REPUBLISHED

ಸಮಗ್ರ ಶಿಕ್ಷಣ, ಕರ್ನಾಟಕ
ನೃಪತುಂಗ ರಸ್ತೆ
ಬೆಂಗಳೂರು – 560 001

ಕರ್ನಾಟಕ ಪಠ್ಯಪುಸ್ತಕ ಸಂಘ
6ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು – 560 003

ಪರಿವಿಡಿ

ಭಾಗ – 2			
ಮೈಲುಗಲ್ಲು	ಶೀರ್ಷಿಕೆ	ಚಟುವಟಿಕೆ ಸಂಖ್ಯೆ	ಪುಟ ಸಂಖ್ಯೆ
5	ಮಾತಿನ ಮಂಟಪ	11	1–14
6	ಶಾಲಾ ಸಂಚಿಕೆ	9	15–26
7	ನನ್ನ ಹಾಡು ನನ್ನದು	13	27–40
8	ಕಥಾ ಹಂದರ	7	41–50
9	ಜೇನುಗೂಡು	8	51–59
10	ನನ್ನ ಬರೆಹ	12	60–81
*	ಮೌಲ್ಯಾಂಕನ – ಸೂಚಿತ ಕಲಿಕಾ ಫಲಗಳು	–	82

@KTBS NOT TO BE REPUBLISHED

5

5.1 ನಾನೂ ಮಾತನಾಡುವೆ

2T

ಚಿತ್ರ ಕುರಿತು ಗೆಳೆಯರೊಂದಿಗೆ ವಿಷಯ ಹಂಚಿಕೊಳ್ಳೋಣ.



ಮಾತನಾಡುವಾಗ ಗಮನಿಸಬೇಕಾದ ಅಂಶಗಳು:

1. ನಗರಗಳಲ್ಲಿ ಕಂಡುಬರುವ ಮಾಲ್‌ಗಳನ್ನು ನೀನು ನೋಡಿರುವೆಯಾ?
2. ಮಾಲ್‌ಗಳಲ್ಲಿ ಏನೇನೆಲ್ಲಾ ಇರುತ್ತದೆ?
3. ಮಾಲ್‌ಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಹಿರಿಯರಿಂದ ಕೇಳಿ ತಿಳಿದುಕೊ.

NOT TO BE REPUBLISHED

☛ ನಾನು ಚೆನ್ನಾಗಿ ಮಾತನಾಡಿದ್ದೇನೆ. ☐

☛ ನಾನು ಇನ್ನೂ ಹೆಚ್ಚು ವಿಷಯ ಮಾತನಾಡಬಹುದಿತ್ತು. ☐


5

5.2 ನನ್ನನ್ನು ಗುರುತಿಸು

2T

ಸಂಭಾಷಣೆಯನ್ನು ಓದೋಣ. ಪೂರ್ಣ ವಿರಾಮ ಹಾಗೂ ಪ್ರಶ್ನಾರ್ಥಕ ಚಿಹ್ನೆಗಳು ಎಲ್ಲೆಲ್ಲಿ ಬಂದಿವೆ ಎನ್ನುವುದನ್ನು ಗಮನಿಸೋಣ.

.	?
ಪೂರ್ಣ ವಿರಾಮ	ಪ್ರಶ್ನಾರ್ಥಕ ಚಿಹ್ನೆ



© KTBS NOT TO BE REPUBLISHED

ನೀವು ಓದಿದ ಪುಸ್ತಕದ ವಾಕ್ಯಗಳಲ್ಲಿ ಪೂರ್ಣ ವಿರಾಮ ಹಾಗೂ ಪ್ರಶ್ನಾರ್ಥಕ ಚಿಹ್ನೆಗಳು ಎಲ್ಲೆಲ್ಲಿ ಬಂದಿವೆ ಎನ್ನುವುದನ್ನು ಗಮನಿಸಿ.

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

5

5.3 ನನ್ನನ್ನು ಗುರುತಿಸು

3



ಲೇಖನಾ ಚಿಹ್ನೆಗಳಲ್ಲಿ ಪೂರ್ಣ ವಿರಾಮವನ್ನು ವೃತ್ತದಿಂದ, ◯ ಪ್ರಶ್ನಾರ್ಥಕ ಚಿಹ್ನೆಯನ್ನು ತ್ರಿಭುಜದಿಂದ △ ಮಾದರಿಯಂತೆ ಗುರುತು ಮಾಡೋಣ.

△ ?	“	?	◯ .	“	!	?
,	.	!	?	!	.	?
‘	?	“	,	?	!	?
.	;	:	?	–	!	.
?	.	?	‘	?	.	!

@KTBS NOT TO BE REPUBLISHED



ದಿನಪತ್ರಿಕೆಯ ಸುದ್ದಿ ಸಮಾಚಾರಗಳಲ್ಲಿ ಪೂರ್ಣ ವಿರಾಮ ಹಾಗೂ ಪ್ರಶ್ನಾರ್ಥಕ ಚಿಹ್ನೆಗಳನ್ನು ಎಲ್ಲೆಲ್ಲಿ ಬಂದಿವೆ ಎಂಬುದನ್ನು ಗುರುತು ಮಾಡೋಣ.

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐


ಶಿಕ್ಷಕರ ಸಹಿ :
ದಿನಾಂಕ :

5

5.4 ನನ್ನನ್ನು ಗುರುತಿಸು

3T

ಎಲ್ಲೆಲ್ಲಿ ಪೂರ್ಣವಿರಾಮ ಹಾಗೂ ಪ್ರಶ್ನಾರ್ಥಕ ಚಿಹ್ನೆಗಳು ಬಂದಿವೆಯೋ, ಆ ಸಾಲುಗಳ ಧ್ವನಿಗಳನ್ನು ಗಮನಿಸಿ ಓದೋಣ.



© KTBS NOT TO BE REPUBLISHED

ಶಾಲಾ ಗ್ರಂಥಾಲಯದಿಂದ ಕಥಾ ಪುಸ್ತಕಗಳನ್ನು ಪಡೆದುಕೋ. ನಿನಗೆ ಇಷ್ಟವಾಗುವ ಕಥೆಗಳಿಗೆ ನೀನೇ ಪಾತ್ರವಾಗಿ ಓದು. ಎಲ್ಲೆಲ್ಲಿ ಪೂರ್ಣವಿರಾಮ ಹಾಗೂ ಪ್ರಶ್ನಾರ್ಥಕ ಚಿಹ್ನೆಗಳು ಬಂದಿವೆಯೋ ಆ ಸಾಲುಗಳ ಧ್ವನಿಗಳನ್ನು ಮತ್ತೊಮ್ಮೆ ಓದು.

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐


ಶಿಕ್ಷಕರ ಸಹಿ :
ದಿನಾಂಕ :

5

5.5 ನಾನು ಯಾರು?

3

ಇಲ್ಲಿನ ಸಂಭಾಷಣೆಯ ಧ್ವನಿಯಲ್ಲಿ ಯಾವುದು ಪ್ರಶ್ನೆ? ಹಾಗೂ ಯಾವುದು ಉತ್ತರ? ಎನ್ನುವುದನ್ನು ತಿಳಿಯೋಣ.



@KTBS NOT TO BE REPUBLISHED

ನಿಮ್ಮ ಸ್ನೇಹಿತರ ಮಾತುಕತೆಯಲ್ಲಿ ತೊಡಗಿದಾಗ ಯಾವುದು ಪ್ರಶ್ನೆ? ಹಾಗೂ ಯಾವುದು ಉತ್ತರ? ಎನ್ನುವುದನ್ನು ಗಮನಿಸಿ ಶಿಕ್ಷಕರಿಗೆ ತಿಳಿಸಿ.

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

5

5.6 ನನ್ನನ್ನು ಗುರುತಿಸು

3

ಈ ಸಂಭಾಷಣೆಯನ್ನು ಓದೋಣ. ಎಲ್ಲೆಲ್ಲಿ, ಯಾವ ಲೇಖನ ಚಿಹ್ನೆ ಬರುತ್ತದೆ ಎಂಬುದನ್ನು ಗಮನಿಸಿ ಬರೆಯೋಣ.



ಹಾಯ್, ಹೇಗಿದ್ದೀಯಾ ( ) ಭೂಮಿ ಮೇಲೆ ಏನ್ ವಿಶೇಷ ( )

ಅಯ್ಯೋ! ಅಲ್ಲಿ ಬದುಕೋದೇ ಕಷ್ಟ ಅನ್ನಿಸ್ತಿದೆ ( )





ಅಣ್ಣಾ, ಯಾಕೆ ಹಾಗಂತೀಯಾ ( )

ಅಲ್ಲಿಯ ಗಾಳಿ ತುಂಬಾ ಕೆಟ್ಟು ಹೋಗಿದೆ ( )





ನಮ್ಮಲ್ಲಿಯ ನೀರೂ ಹಾಳಾಗ್ತಿದೆ ಅಲ್ವಾ ( )

ಹೌದು ಎಲ್ಲರೂ ಸೇರಿ ಪರಿಸರ ಉಳಿಸಬೇಕಾಗಿದೆ ( )



@KTBS NOT TO BE REPUBLISHED

5

5.6 ನನ್ನನ್ನು ಗುರುತಿಸು

ಮುಂದುವರೆದಿದೆ....

3



ಇಲ್ಲಿನ ಸಂಭಾಷಣೆಗೆ ತಕ್ಕಂತೆ ಪ್ರಶ್ನಾರ್ಥಕ ಚಿಹ್ನೆ ಹಾಗೂ ಪೂರ್ಣವಿರಾಮ ಚಿಹ್ನೆಗಳನ್ನು ಗುರುತಿಸೋಣ.

ರಿಂಕು : ನಿನ್ನೆ ನೀನು ಯಾಕೆ ಶಾಲೆಗೆ ಬಂದಿರಲಿಲ್ಲ ☐

ಪಿಂಕಿ : ನಿನ್ನೆ ಮನೆಯವರೆಲ್ಲರೂ ಸೇರಿ ಪ್ರವಾಸಕ್ಕೆ ಹೋಗಿದ್ವಿ ☐

ರಿಂಕು : ಹೌದಾ! ಎಲ್ಲಿಗೆ ಹೋಗಿದ್ರಿ ☐

ಪಿಂಕಿ : ಕುಮಟಾಕ್ಕೆ ಹೋಗಿದ್ವಿ ☐

ರಿಂಕು : ಅಲ್ಲಿ ಏನೇನು ನೋಡಿದ್ರಿ ☐

ಪಿಂಕಿ : ಅಲ್ಲಿ ಯಾಣ, ಮಿರ್ಜಾನ ಕೋಟೆ, ಗೋಕರ್ಣ ಎಲ್ಲಾ ನೋಡಿದ್ವಿ ☐ ಸಂಜೆ ಬೀಚ್‌ನಲ್ಲಿ ಆಟ ಆಡಿದ್ವಿ ☐ ತುಂಬಾ ಖುಷಿ ಆಯ್ತು ☐ ನೀವೆಲ್ಲೂ ಹೋಗಿಲ್ವಾ ☐

ರಿಂಕು : ನಿನ್ನೆ ಹೋಗಿಲ್ಲ ☐ ಅಪ್ಪ ಮುಂದಿನ ವಾರ ಮೈಸೂರಿಗೆ ಹೋಗೋಣ ಅಂದಿದ್ದಾರೆ ☐

ಪಿಂಕಿ : ಹೌದಾ! ಪ್ರವಾಸ ಯಾವಾಗ್ಲೂ ಖುಷಿ ☐



ನಿಮ್ಮ 2ನೇ ತರಗತಿ ಕನ್ನಡ ಪುಸ್ತಕದ ಯಾವುದಾದರೊಂದು ಕಥೆಯಲ್ಲಿ ಕಂಡುಬರುವ ಪೂರ್ಣವಿರಾಮ ಹಾಗೂ ಪ್ರಶ್ನಾರ್ಥಕ ಚಿಹ್ನೆಗಳನ್ನು ಗುರುತಿಸಿ ಗೆಳೆಯರಿಗೆ ತೋರಿಸೋಣ.

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

©KTBS NOT TO BE REPUBLISHED

5

5.7 ಪುಸ್ತಕ ಲೋಕ

2T

ಪಟ್ಟಿಯಲ್ಲಿರುವ ಪುಸ್ತಕಗಳು ವಾಸ್ತವಿಕ (*Non-Fiction*) ವಿಷಯಕ್ಕೆ ಸಂಬಂಧಿಸಿದ್ದೋ, ಕಾಲ್ಪನಿಕ (*Fiction*) ವಿಷಯಕ್ಕೆ ಸಂಬಂಧಿಸಿದ್ದೋ ಎಂದು ಅರಿತು ಕೊಳ್ಳೋಣ. ಹಿರಿಯರ ಸಹಾಯದಿಂದ ಪುಸ್ತಕದ ಹೆಸರಿನ ಮುಂದೆ ☑ (ಸರಿ) ಗುರುತು ಹಾಕೋಣ.



ಕ್ರ.ಸಂ	ಪುಸ್ತಕದ ಹೆಸರು	ವಾಸ್ತವಿಕ	ಕಾಲ್ಪನಿಕ
1	ಪ್ರಾಣಿ–ಪ್ರಾಣಿ ಪರಿಸರ		
2	ಪಂಚತಂತ್ರದ ಕಥೆಗಳ ಪುಸ್ತಕ		
3	ಮಕ್ಕಳ ನೀತಿ ಕಥೆಗಳು		
4	ಪ್ರಾಣಿ–ಪಕ್ಷಿಗಳ ವಾಸ, ತಿನ್ನುವ ಆಹಾರ ಇವುಗಳ ಕುರಿತಾದ ಪುಸ್ತಕ		
5	ನೆಲದೊಡಲ ಚಿಗುರು		
6	ಅಕ್ಬರ್ ಬೀರಬಲ್ಲನ ಕಥೆಗಳು		

ಸೂಚನೆ: ಶಿಕ್ಷಕರು ಈ ಬಗ್ಗೆ ಅರ್ಥೈಸಿಕೊಂಡು ನಂತರ ಮಕ್ಕಳಿಗೆ ಪುಸ್ತಕಗಳ ವಿಧಗಳನ್ನು ಕುರಿತಂತೆ ಸರಳವಾಗಿ ಅರ್ಥಮಾಡಿಸುವುದು.

© KTBS NOT TO BE REPUBLISHED

5

5.8 ಖುಷಿ..ಕುತೂಹಲ...ಕಲ್ಪನೆ....

3



ನಾವು ಓದಿದ ಪುಸ್ತಕಗಳನ್ನು ವಾಸ್ತವಿಕ ಹಾಗೂ ಕಾಲ್ಪನಿಕ ವಿಷಯಗಳ ಪುಸ್ತಕಗಳನ್ನಾಗಿ ವಿಂಗಡಿಸೋಣ.

ಕ್ರ.ಸಂ	ಪುಸ್ತಕಗಳ ಹೆಸರು	ವಾಸ್ತವಿಕ (Non-Fiction)	ಕಾಲ್ಪನಿಕ (Fiction)
1			
2			
3			
4			
5			
6			
7			
8			
9			
10			

@KTBS NOT TO BE REPUBLISHED

ಸೂಚನೆ: ಶಿಕ್ಷಕರು ಈ ಬಗ್ಗೆ ಅರ್ಥೈಸಿಕೊಂಡು ನಂತರ ಮಕ್ಕಳಿಗೆ ಪುಸ್ತಕಗಳ ವಿಧಗಳನ್ನು ಕುರಿತಂತೆ ಸರಳವಾಗಿ ಅರ್ಥಮಾಡಿಸುವುದು.

5

5.9 ನನ್ನ ಪುಸ್ತಕ ಸುಂದರ ಪುಸ್ತಕ

2T

ಈ ರೀತಿಯ ಪುಸ್ತಕಗಳನ್ನು ಹೇಗೆ ಸರಿಪಡಿಸಬಹುದು ಎಂದು ಹಿರಿಯರ ಸಹಾಯದಿಂದ ಕೇಳಿ ತಿಳಿಯೋಣ.

ಕ್ರ.ಸಂ	ಸರಿಪಡಿಸಬೇಕಾದ ಪುಸ್ತಕಗಳ ವಿಧಗಳು
1	ಹಾಳೆಗಳು ಮಡಚಿರುವ ಪುಸ್ತಕಗಳು
2	ಅಂಟಿನಿಂದ ಬೇರೆಯಾಗಿರುವ ಪುಸ್ತಕದ ಹಾಳೆಗಳು
3	ಪಿನ್ ಕಿತ್ತು ಹೋಗಿರುವ ಪುಸ್ತಕಗಳು
4	ಒದ್ದೆ ಆಗಿರುವ ಪುಸ್ತಕಗಳು

© KTBS NOT TO BE REPUBLISHED

ಹಾಳಾದ ಪುಸ್ತಕಗಳನ್ನು ಸರಿಪಡಿಸುವ ಕೆಲವು ವಿಧಾನಗಳನ್ನು ತಿಳಿಸಿದೆ. ನಮ್ಮಿಂದ ಪುಸ್ತಕ ಸರಿಪಡಿಸಲು ಸಾಧ್ಯವಾಗುವಂತೆ ಇದ್ದರೆ √ ಗುರುತು ಹಾಕೋಣ. ಸಾಧ್ಯವಾಗದಿದ್ದರೆ × ಗುರುತು ಹಾಕೋಣ. ಸಾಧ್ಯವಾಗದಿರುವುದನ್ನು ಹಿರಿಯರಿಂದ ಕೇಳಿ ತಿಳಿದುಕೊಳ್ಳೋಣ.





- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

5


5.9 ನನ್ನ ಪುಸ್ತಕ ಸುಂದರ ಪುಸ್ತಕ

ಮುಂದುವರೆದಿದೆ...


2














© IETB NOT TO BE REPUBLISHED



ನಮ್ಮ ಹಾಳಾದ ಪುಸ್ತಕಗಳನ್ನೂ ಇದೇ ರೀತಿಯಲ್ಲಿ ಸರಿಪಡಿಸೋಣ.

✦ ನನಗೆ ಅರ್ಥವಾಗಿದೆ	☐
✦ ನನಗೆ ಸಹಾಯ ಬೇಕಿದೆ	☐

ಶಿಕ್ಷಕರ ಸಹಿ :

ದಿನಾಂಕ :

5

5.10 ನಾನೂ ಪುಸ್ತಕಗಳನ್ನು ಜೋಡಿಸುವೆ

3

ಚಿತ್ರದಲ್ಲಿರುವಂತೆ ನಾವೂ ಸಹ ನಮ್ಮ ಶಾಲಾ ಗ್ರಂಥಾಲಯ ಅಥವಾ ಓದುವ ಮೂಲೆಯಲ್ಲಿರುವ ಪುಸ್ತಕಗಳನ್ನು ಗೆಳೆಯರೊಂದಿಗೆ ಜೋಡಿಸಲು ಪ್ರಯತ್ನಿಸೋಣ.



ಇದೊಂದು ಮಾದರಿ ಮಾತ್ರ. ನಿಮ್ಮದೇ ಮಾದರಿಯಲ್ಲಿ ಭಿನ್ನವಾಗಿ ಜೋಡಿಸಬಹುದು.

ನಮ್ಮ ಮನೆಯಲ್ಲಿರುವ ಪುಸ್ತಕಗಳನ್ನು ನಮ್ಮದೇ ಮಾದರಿಯಲ್ಲಿ ಜೋಡಿಸೋಣ.

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐


ಶಿಕ್ಷಕರ ಸಹಿ :
ದಿನಾಂಕ :

5


5.11 ಕಾಮನಬಿಲ್ಲು

3

1. ಈಗಾಗಲೇ ಕಲಿತಿರುವ ಪದಗಳಲ್ಲಿ ಇಷ್ಟವಾದ ಪದಗಳನ್ನು ಇಲ್ಲಿ ಬರೆಯೋಣ.



2. ಸುಳಿವು ಅಕ್ಷರಗಳನ್ನು ಬಳಸಿ, ಪದಗಳನ್ನು ಪೂರ್ಣಗೊಳಿಸಿ ಓದೋಣ.
ಸುಳಿವು: ದ್ದೆ, ಪ್ರ, ಕ್ಷ, ಸ್ತ, ನ್ನು, ಲ್ಲಿಂ, ಚ್ಚಿ, ದ್ದ, ಲ್ಪ



- ನನಗೆ ಅರ್ಥವಾಗಿದೆ
- ನನಗೆ ಸಹಾಯ ಬೇಕಿದೆ

ಶಿಕ್ಷಕರ ಸಹಿ :
ದಿನಾಂಕ :

NOT TO BE REPUBLISHED ©KTBS

5

5.11 ಕಾಮನಬಿಲ್ಲು

ಮುಂದುವರೆದಿದೆ...

3

3. ಪದಜಾಲದಲ್ಲಿ ಅಡಗಿರುವ ಪದಗಳನ್ನು ಗುರುತಿಸಿ ಬರೆಯೋಣ.

ವಿ	ಛಾ	ಓ	ದೋ	ಣ	ಕ
ರಾ	ಶೇ	ಲೈ	ಣಿ	ಕೌ	ನ
ಮ	ನ	ಸು	ಳೂ	ರಾ	ಸು
ಪೀ	ಷ	ಮ	ಬೆ	ರ	ಗು
ಐ	ದು	ಜ	ಣೊ	ಹಾ	ಳ

4. ಈಗಾಗಲೇ ಕಲಿತಿರುವ ಪದಗಳನ್ನು ಉಕ್ತಲೇಖನ ತೆಗೆದುಕೊಳ್ಳೋಣ.

@KTBS NOT TO BE REPUBLISHED

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

6

6.1 ನಾನೂ ಮಾತನಾಡುವೆ

2T

ಚಿತ್ರ ಕುರಿತು ಗೆಳೆಯರೊಂದಿಗೆ ವಿಷಯ ಹಂಚಿಕೊಳ್ಳೋಣ.



NOT TO BE REPUBLISHED

ಮಾತನಾಡುವಾಗ ಗಮನಿಸಬೇಕಾದ ಅಂಶಗಳು:

1. ಇದು ಯಾವ ಸನ್ನಿವೇಶದ ಚಿತ್ರವಾಗಿದೆ ಎಂದು ನೋಡಿ ಹೇಳಿ.
2. ಪುಸ್ತಕ ಮೇಳ ಅಥವಾ ಪುಸ್ತಕ ಸಂತೆಯ ಬಗ್ಗೆ ಹಿರಿಯರಿಂದ ತಿಳಿದು ಮಾತನಾಡು.
3. ಪುಸ್ತಕಗಳಿಂದ ನಮಗಾಗುವ ಪ್ರಯೋಜನಗಳನ್ನು ನಿನ್ನ ಗೆಳೆಯರೊಂದಿಗೆ ಹಂಚಿಕೊ.

☛ ನಾನು ಉತ್ತಮವಾಗಿ ಮಾತನಾಡಿದ್ದೇನೆ. ☐

☛ ಇನ್ನೂ ಹೆಚ್ಚು ವಿಷಯ ಸೇರಿಸಿ ಮಾತನಾಡಿದ್ದರೆ ಇನ್ನೂ ಉತ್ತಮವಾಗಿರುತ್ತಿತ್ತು. ☐


6

6.2 ಮಾಹಿತಿ ಸಂಪದ

2T

ಇಲ್ಲಿರುವ ಮಾಹಿತಿಗಳನ್ನು ಗೆಳೆಯರಿಗೆ ತಿಳಿಸೋಣ.

ಇದು ಮಾದರಿಯಾಗಿದ್ದು ಇಂತಹ ಯಾವುದೇ ಸೂಕ್ತ ಮಾಹಿತಿಯನ್ನು ಪ್ರದರ್ಶಿಸುವುದು.









© KSTBP NOT TO BE PUBLISHED

✦ ನನಗೆ ಅರ್ಥವಾಗಿದೆ	☐
✦ ನನಗೆ ಸಹಾಯ ಬೇಕಿದೆ	☐


ಶಿಕ್ಷಕರ ಸಹಿ :

ದಿನಾಂಕ :

6

6.3 ಆಮಂತ್ರಣ ಪತ್ರಿಕೆ

ಮಣಿ, ಇಂದು ಬೆಳಿಗ್ಗೆ ಟೀಚರ್ ಹೇಳಿದ್ದು ನೆನಪಿದ್ಯಾ?




ಆಮಂತ್ರಣ ಪತ್ರಿಕೆ ಸಿದ್ಧ ಮಾಡೋದಲ್ವಾ? ನೆನಪಿದೆ. ನೀನು ಸಿದ್ಧ ಮಾಡಿದ್ಯಾ?



ಒಂದನ್ನು ರೆಡಿ ಮಾಡಿದ್ದೇನೆ. ನಾಳೆ ಟೀಚರ್‌ಗೆ ತೋರಿಸ್ಬೇಕು. ಸರಿ ಆಗಿದ್ಯಾ ಅಂತ ಕೇಳ್ಬೇಕು.

ಹೌದಾ. ನಾನೂ ಒಂದು ರೆಡಿ ಮಾಡಿದ್ದೇನೆ. ನೀನು ಹೇಗೆ ತಯಾರಿ ಮಾಡಿದ್ದಿಯಾ ಎಂದು ತೋರ್ಸು. ಹೇಗಿದೆ ನೋಡೋಣ. ಆಮೇಲೆ ನಾನೂ ತೋರಿಸ್ತೀನಿ.





ಸರಿ, ಓದಿ ನೋಡು. ತಪ್ಪಿದ್ರೆ ಹೇಳು. ಟೀಚರ್ ಹೇಳಿದ ಹಾಗೆ ದಿನಾಂಕ, ಸ್ಥಳ, ವಿವರ ಸೇರಿಸುವ ಪ್ರಯತ್ನ ಮಾಡಿದ್ದೀನಿ.

ಆಯ್ತು. ಈಗ ನನ್ನ ಸರದಿ.

© KTBS NOT TO BE REPUBLISHED

6

6.3 ಆಮಂತ್ರಣ ಪತ್ರಿಕೆ

ಮುಂದುವರೆದಿದೆ...

ಎಲ್ಲರಿಗೂ ಪ್ರೀತಿಯ ನಮಸ್ಕಾರಗಳು.

ನಮ್ಮ ಶಾಲೆಯಲ್ಲಿ ನಡೆಯುವ ಚಿಣ್ಣರ ಚಿಲಿಪಿಲಿ ಕಾರ್ಯಕ್ರಮಕ್ಕೆ ಬರಲು ನಿಮಗೆ ತಮ್ಮಲ್ಲಿ ಕೇಳಿಕೊಳ್ಳುತ್ತೇವೆ. ಹಾಡು, ನೃತ್ಯ, ನಾಟಕ ಎಲ್ಲವೂ ಇವೆ. ದಿನಾಂಕ: 14–11–2024 ರಂದು ಮಧ್ಯಾಹ್ನ 3 ಗಂಟೆಯಿಂದ ಪ್ರಾರಂಭ. ಎಲ್ಲರೂ ಬನ್ನಿ.

ಸರ್ವರಿಗೂ ಸುಸ್ವಾಗತ.



ಸುಳಿವು ಆಧರಿಸಿ ಆಮಂತ್ರಣ ಪತ್ರಿಕೆ ಸಿದ್ಧ ಪಡಿಸೋಣ.

ಆಮಂತ್ರಣ ಪತ್ರಿಕೆ

ಎಲ್ಲರಿಗೂ _____.

ನಮ್ಮ ಶಾಲೆಯಲ್ಲಿ ನಡೆಯುವ _____

ಕಾರ್ಯಕ್ರಮಕ್ಕೆ _____ ಕೇಳಿಕೊಳ್ಳುತ್ತೇವೆ.

ಕಾರ್ಯಕ್ರಮದಲ್ಲಿ _____ ಇರುತ್ತದೆ.

ಎಲ್ಲರೂ ಬನ್ನಿರಿ,

ದಿನಾಂಕ: _____ ಸಮಯ: _____

ಸ್ಥಳ: _____

ಇದು ನಮ್ಮ ಶಾಲೆ, ನಮ್ಮೂರ ಹೆಮ್ಮೆ.
ಸರ್ವರಿಗೂ ಸುಸ್ವಾಗತ.

@KTBS NOT TO BE REPUBLISHED

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐


ಶಿಕ್ಷಕರ ಸಹಿ :
ದಿನಾಂಕ :

6


6.4 ಓದಿ ವಿವರಿಸು

2T

ವಿವಿಧ ಮಾಹಿತಿ ಬರೆಹಗಳನ್ನು ಓದೋಣ. ಅವುಗಳ ಬಗ್ಗೆ ಗೆಳೆಯರಿಗೆ ಅಥವಾ ಹಿರಿಯರಿಗೆ ವಿವರಿಸೋಣ.



- ಕಾಡು ಉಳಿಸಿ, ನಾಡು ಬೆಳೆಸಿ.
- ಮನೆಗೊಂದು ಮರ,
  ಊರಿಗೊಂದು ವನ.
- ಹಸಿರೇ ಉಸಿರು.



- ಮಕ್ಕಳನ್ನು ಕೆಲಸದಿಂದ
  ಮುಕ್ತಗೊಳಿಸಿ.
- ಮಕ್ಕಳಿಗೆ ಶಿಕ್ಷಣ ನೀಡಿ.
- ಮಕ್ಕಳ ಭವಿಷ್ಯವನ್ನು
  ಉತ್ತಮವಾಗಿಸಿ.

@KTBS NOT TO BE REPUBLISHED

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

6

6.4 ಓದಿ ವಿವರಿಸು

ಮುಂದುವರೆದಿದೆ...

2



ಮಕ್ಕಳೇ, ಎಂತಹ ಸಂದರ್ಭದಲ್ಲೂ ನಿಮ್ಮ ಸಹಾಯಕ್ಕೆ ನಾನಿದ್ದೇನೆ. ಕರೆಮಾಡಿ.

1098



ಆಹಾರ

1. ಯೋಚಿಸಿ ಖರೀದಿಸಿ.
2. ಜಾಗರೂಕತೆಯಿಂದ ತಯಾರಿಸಿ.
3. ಮಿತವಾಗಿ ಬಳಸಿ.
4. ಸ್ಥಳೀಯ ಆಹಾರ ಪದಾರ್ಥಗಳನ್ನು ಖರೀದಿಸಿ
5. ಅವಶ್ಯಕತೆ ಇದ್ದಷ್ಟೇ ಬಡಿಸಿ.
6. ಉಳಿದುದನ್ನೂ ಬಳಸಿ.
7. ಪೋಲು ಮಾಡಬೇಡಿ

© DSERT DO NOT BE REPUBLISHED

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

6

6.5 ನನ್ನ ರಚನೆ

3



ನಮ್ಮದೇ ಆದ ಮಾಹಿತಿ ಬರೆಹದ ಚಿತ್ರವನ್ನು ರಚಿಸೋಣ. ಅದನ್ನು ಗೆಳೆಯರ ಅಥವಾ ಹಿರಿಯರ ಮುಂದೆ ಓದೋಣ.

@KTBS
NOT TO BE REPUBLISHED



ವಿವಿಧ ಮಾಹಿತಿ ಬರೆಹಗಳ ಚಿತ್ರಗಳನ್ನು ಸಂಗ್ರಹಿಸಿ ಅಲ್ಬಂ ತಯಾರಿಸೋಣ. ಶಾಲೆಯಲ್ಲಿ ಸ್ನೇಹಿತರ ಮುಂದೆ ಆಲ್ಬಂ ಚಿತ್ರಗಳನ್ನು ವಿವರಿಸೋಣ.

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐


ಶಿಕ್ಷಕರ ಸಹಿ :
ದಿನಾಂಕ :

6

6.6 ಶಾಲಾ ಸೂಚನಾ ಫಲಕ

2T

ಕೊಟ್ಟಿರುವ ಶಾಲೆಯ ಸೂಚನಾ ಫಲಕದ ಮಾಹಿತಿಯನ್ನು ಓದೋಣ. ನಮ್ಮ ಶಾಲೆಯ ವಿಶೇಷತೆಗಳನ್ನು ಸೇರಿಸಿ, ಸೂಚನಾ ಫಲಕದ ಮಾಹಿತಿಯನ್ನು ಸಿದ್ಧಪಡಿಸೋಣ.



@KTBS NOT TO BE REPUBLISHED

ಆದರ್ಶ ವಿದ್ಯಾರ್ಥಿಯ ಲಕ್ಷಣಗಳು

1. ವಿನಯವಂತಿಕೆ
2. ಸಮಯ ಪಾಲನೆ
3. ಸತತ ಅಭ್ಯಾಸ
4. ಹಿರಿಯರಲ್ಲಿ ಗೌರವ
5. ಮುಂದಾಲೋಚನೆ
6. ವಿಧೇಯತೆ
7. ಪ್ರಯೋಗಶೀಲತೆ
8. ಆತ್ಮ ವಿಶ್ವಾಸ
9. ಜವಾಬ್ದಾರಿ ತೆಗೆದುಕೊಳ್ಳುವುದು
10. ನಾಯಕತ್ವ ಗುಣ
11. ಸಂಘಟನಾ ಚತುರತೆ
12. ಸ್ವಯಂ ಶಿಸ್ತು
13. ಪರಿಸರ ಪ್ರಜ್ಞೆ

ದಿನದ ವಿಶೇಷ

ದಿನಾಂಕ: 01–11–2022

ಕನ್ನಡ ರಾಜ್ಯೋತ್ಸವ

ಸುಭಾಷಿತ

ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

6

6.7 ಶಾಲಾ ಸಂಚಿಕೆ

2T

ಕೆಲವು ಶಾಲೆಗಳು ಸಿದ್ಧಪಡಿಸಿದ ಶಾಲಾ ಪತ್ರಿಕೆಗಳನ್ನು ಗಮನಿಸೋಣ. ನಮ್ಮ ಶಾಲೆಯ ಪತ್ರಿಕೆಯೊಂದಿಗೆ ಹೋಲಿಸಿ ಗೆಳೆಯರೊಂದಿಗೆ ಮಾಹಿತಿ ಹಂಚಿಕೊಳ್ಳೋಣ.



ಗೆಳೆಯರೆಲ್ಲಾ ಸೇರಿ ಒಂದು ಡ್ರಾಯಿಂಗ್ ಹಾಳೆಯಲ್ಲಿ ನಮ್ಮದೇ ಕಲ್ಪನೆಯಂತೆ ಒಂದು ಪುಟದಷ್ಟು ಪತ್ರಿಕೆಯ ವಿನ್ಯಾಸವನ್ನು ಸಿದ್ಧಪಡಿಸೋಣ.

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :


6

6.8 ಶಾಲಾ ಪತ್ರಿಕೆ ವಿಶೇಷತೆ


3

ನಮ್ಮ ಶಾಲಾ ಪತ್ರಿಕೆಗಾಗಿ ನಮ್ಮ ಇಷ್ಟದ ವಿಷಯಗಳನ್ನು ಇಲ್ಲಿ ಬರೆಯೋಣ. ಅವುಗಳನ್ನು ಗೆಳೆಯರ ಅಥವಾ ಹಿರಿಯರ ಎದುರು ಓದೋಣ.









@KTBS NOT TO BE REPUBLISHED

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐


ಶಿಕ್ಷಕರ ಸಹಿ :
ದಿನಾಂಕ :

6

6.9 ಕಾಮನ ಬಿಲ್ಲು

3

1. ಈಗಾಗಲೇ ಕಲಿತಿರುವ ಪದಗಳಲ್ಲಿ ಇಷ್ಟವಾದ ಪದಗಳನ್ನು ಇಲ್ಲಿ ಬರೆಯೋಣ.



2. ಇಲ್ಲಿ ನೀಡಿದ ಪದಗಳ ಅಕ್ಷರಗಳು ಬದಲಾಗಿವೆ. ಅವುಗಳನ್ನು ಸರಿಪಡಿಸಿ ನೀಡಿದ ಜಾಗದಲ್ಲಿ ಬರೆದು ಓದೋಣ.

ಯೋಗಪ್ರ	ರಂಭಪ್ರಾ	ಕನಾಂದಿ
ವಿನಜ್ಞಾ	ಮಂಣತ್ರಳ	ರಪಕತ್ರ

© KTBS NOT TO BE REPUBLISHED

- ನನಗೆ ಅರ್ಥವಾಗಿದೆ
- ನನಗೆ ಸಹಾಯ ಬೇಕಿದೆ

ಶಿಕ್ಷಕರ ಸಹಿ :
ದಿನಾಂಕ :

3. ಈಗಾಗಲೇ ಗಮನಿಸಿರುವ ಆಮಂತ್ರಣ ಪತ್ರಿಕೆ ಹಾಗೂ ಮಾಹಿತಿ ಸಂಪದಗಳಲ್ಲಿಯ ಪದಗಳನ್ನು ಆಧರಿಸಿ ಪದ ಪಿರಾಮಿಡ್ ಪೂರ್ಣಗೊಳಿಸೋಣ.

ಅ) 'ತ್' ವ್ಯಂಜನ ಆಧರಿಸಿದೆ.

		ನೃ	
	ಪ್ರ	ಯ	
ವಿ	ಶೇ	ಷ	

ಅ) 'ಸ್' ವ್ಯಂಜನ ಆಧರಿಸಿದೆ.

			ರಿ
	ವಿ	ಶ್ವಾ	
ಪ	ರಿ		ರ

@KTBS NOT TO BE REPUBLISHED

4. ಈಗಾಗಲೇ ಕಲಿತಿರುವ ಪದಗಳನ್ನು ಉಕ್ತಲೇಖನ ತೆಗೆದುಕೊಳ್ಳೋಣ.

_____	_____	_____
_____	_____	_____
_____	_____	_____
_____	_____	_____
_____	_____	_____
_____	_____	_____
_____	_____	_____
_____	_____	_____

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

7

7.1 ನಾನೂ ಮಾತನಾಡುವೆ

2T

ಚಿತ್ರದ ಕುರಿತು ಗೆಳೆಯರೊಂದಿಗೆ ಹಂಚಿಕೊಳ್ಳೋಣ



ಮಾತನಾಡುವಾಗ ಗಮನಿಸಬೇಕಾದ ಅಂಶಗಳು:

1. ಚಿತ್ರದಲ್ಲಿ ಏನನ್ನು ನೋಡುತ್ತಿರುವೆ?
2. ನೀನು ಎಂದಾದರೂ ರೈಲಿನಲ್ಲಿ ಪ್ರಯಾಣ ಮಾಡಿದ್ದೀಯಾ?
3. ಮಹಾ ನಗರಗಳಲ್ಲಿ ಓಡಾಡಲು ಜನರಿಗೆ ಮೆಟ್ರೋ ರೈಲಿನ ವ್ಯವಸ್ಥೆ ಮಾಡಲಾಗಿದೆ. ಈ ಬಗ್ಗೆ ನಿನಗೆ ತಿಳಿದಿದೆಯೆ? ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸು.

NOT TO BE REPUBLISHED

ನನ್ನ ಮಾತುಗಳಿಗೆ ನಾನು ಬಣ್ಣ ಹಚ್ಚುವ ಸ್ಟಾರ್‌ಗಳು

7

7.2 ಮಾತುಕತೆ

2T

ಸಂಭಾಷಣೆಯನ್ನು ಕೇಳೋಣ. ಶಬ್ದಕೋಶದಲ್ಲಿ ಪದಗಳ ಅರ್ಥ ಹುಡುಕೋಣ.



ಚಂದು, ನೀನು ನಿನ್ನೆ ಶಾಲೆಯಲ್ಲಿ ಹೇಳಿದ ಹಾಡು ತುಂಬಾ ಚೆನ್ನಾಗಿತ್ತು.

ನನಗೆ ಯಾರು ಹಾಡು ಹೇಳಿ ಕೊಡುತ್ತಾರೆ?

ಚಂದು ನಮ್ಮ ಪುಸ್ತಕದಲ್ಲಿ ಒಂದು ಪದ್ಯ ಇದೆ ಹಾಡೋಣ್ವಾ?

ಹ್ಞಾಂ! ವಿನ್ನಿ. ನನಗೆ ಹಾಡು ಹೇಳೋದು ಅಂದರೆ ತುಂಬಾ ಇಷ್ಟ



ಚಂದುವಿಗೆ ಯಾರು ಹಾಡು ಹೇಳಿಕೊಟ್ಟಿರಬಹುದು? ಯೋಚಿಸಿ ಹೇಳೋಣ



ಹಾ! ಸರಿ



ನನಗೆ ಕೆಲವು ಹೊಸ ಪದಗಳು ಅರ್ಥ ಆಗ್ತಿಲ್ಲ.

ಹೌದಲ್ವಾ! ಶಬ್ದಕೋಶದಲ್ಲಿ ಹುಡುಕೋಣ ಬಾ.

ನಿನ್ನೆ ಟೀಚರ್ ಹೇಳಿದ್ರಲ್ಲ ನೆನಪಿಸಿಕೋ?





ವಿನ್ನಿಗೆ ಶಬ್ದಕೋಶದಲ್ಲಿ ಈ ಪದಗಳ ಅರ್ಥ ಹುಡುಕಲು ಸಹಾಯ ಮಾಡೋಣ.

ನೇಸರ = _____

ಶಶಿ = _____

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

© KTBS NOT TO BE REPUBLISHED


7

7.3 ಹೊಸ ಪದಕ್ಕೆ ಬಣ್ಣ ಹಚ್ಚು

2T

ಈ ಪದ್ಯವನ್ನು ಓದೋಣ. ಈ ಪದ್ಯದಲ್ಲಿ ಬಂದಿರುವ ಹೊಸ ಪದಗಳಿಗೆ ವೃತ್ತ ಹಾಕೋಣ.

ಕಾಮನಬಿಲ್ಲು



ಕಾಮನಬಿಲ್ಲು ಕಮಾನು ಕಟ್ಟಿದೆ
ಮೋಡದ ನಾಡಿನ ಬಾಗಿಲಿಗೆ.

ಬಣ್ಣಗಳೇಳನು ತೋರಣ ಮಾಡಿದೆ
ಕಂದನ ಕಣ್ಣಿಗೆ ಚಂದವನೂಡಿದೆ.

ಹಣ್ಣಿನ ಹೂವಿನ ಹೊನ್ನನು ಕೂಡಿದೆ
ಮಕ್ಕಳಿಗೋಕುಳಿಯಾಟವನೂಡಿದೆ.

ತೆಂಗಿನ ತೋಟದ ಬುಡದಲಿ ಮೂಡಿದೆ
ಭೂಮಿಗೆ ಬಾನಿಗೆ ಸೇತುವೆ ಹೂಡಿದೆ.

ಕಾಮನಬಿಲ್ಲು ಕಮಾನು ಕಟ್ಟಿದೆ
ಮೋಡದ ನಾಡಿನ ಬಾಗಿಲಿಗೆ.





–ಕುವೆಂಪು

@KTBS NOT TO BE REPUBLISHED

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

7

7.4 ಅರ್ಥ ತಿಳಿ


3

ಶಬ್ದಕೋಶ ಬಳಸಿ ಪದ್ಯದಲ್ಲಿನ ಹೊಸ ಪದಗಳಿಗೆ ಅರ್ಥವನ್ನು ಹುಡುಕಿ ಬರೆಯೋಣ.

1. ಕಂದ = _____
2. ಬಾನು = _____
3. ಹೊನ್ನು = _____
4. ಮೂಡು = _____
5. ಕಮಾನು = _____
6. ತೋರಣ = _____
7. ಓಕುಳಿ = _____
8. ಸೇತುವೆ = _____

- ಕೆಳಗಿನ ಪದಗಳನ್ನು ಅರ್ಥೈಸಿಕೊಂಡು ವಾಕ್ಯಗಳಿಗೆ ಸರಿಹೊಂದುವ ಪದ ಆರಿಸಿ ಬರೆಯೋಣ.

(ಸೇತುವೆ, ಕಮಾನಿನ, ಓಕುಳಿ, ತೋರಣ)

1. ಹೋಳಿ ಹಬ್ಬದಲ್ಲಿ ಒಬ್ಬರಿಗೊಬ್ಬರು ಬಣ್ಣ ಹಚ್ಚಿ  _____ಆಡುತ್ತಾರೆ.

2. ಹಬ್ಬದ ದಿನ ನಮ್ಮ ಮನೆಯ ಬಾಗಿಲಿಗೆ  _____ಕಟ್ಟುತ್ತೇವೆ.

3. ನಮ್ಮ ಶಾಲೆಯ ಪ್ರವೇಶ ದ್ವಾರ  _____ಆಕಾರದಲ್ಲಿ ಇದೆ .

4. ನಾನು ಶಾಲೆಗೆ ಹೋಗುವಾಗ ದಾರಿಯಲ್ಲಿ ಸಿಗುವ ನದಿಗೆ _____ ಕಟ್ಟಿದ್ದಾರೆ. 

@KTBS NOT TO BE REPUBLISHED

ಸೂಚನೆ: ಶಿಕ್ಷಕರು ಕಿರುಶಬ್ದಕೋಶವನ್ನು ಮಕ್ಕಳಿಗೆ ಪರಿಚಯಿಸುವುದು. ಅದರಲ್ಲಿ ಪದಗಳಿಗೆ ಅರ್ಥವನ್ನು ಹೇಗೆ ಹುಡುಕಬಹುದು ಎಂಬುದರ ಅಭ್ಯಾಸ ಮಾಡಿಸುವುದು. (ದಿನಕ್ಕೆ 2–3 ಪದಗಳಂತೆ)

7

7.5 ಪದ ಫಲಕ

3

ಇಲ್ಲಿ ನೀಡಿರುವ ಅಕ್ಷರಗಳಿಂದ ಪ್ರಾರಂಭವಾಗುವ ಯಾವುದಾದರೂ ನಾಲ್ಕು ಹೊಸ ಪದಗಳನ್ನು ಬರೆದು, ಆ ಪದಗಳಿಗೆ ಶಬ್ದಕೋಶದ ಸಹಾಯದಿಂದ ಅರ್ಥ ಹುಡುಕಿ ಬರೆಯೋಣ.

ಅ

ಅಮರ=ಶಾಶ್ವತ

_____ = _____

_____ = _____

_____ = _____

ಕ

ಕದ = ಬಾಗಿಲು

_____ = _____

_____ = _____

_____ = _____





ಮ

_____ = _____

_____ = _____

_____ = _____

_____ = _____

ನ

_____ = _____

_____ = _____

_____ = _____

_____ = _____

@KTBS NOT TO BE REPUBLISHED

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

7

7.6 ಪದಗಳ ಆಟ ಆಡು

2T



ಡೈಸ್ ಬಳಸಿ ಪದಗಳ ಆಟ ಆಡೋಣ.
ಚಂದುವಿಗೆ ಮನೆಯಿಂದ ಶಾಲೆಗೆ ಹೋಗಲು ಸಹಾಯ ಮಾಡೋಣ.

ಆಟದ ನಿಯಮಗಳು :

- ಚಂದು ಇರುವ ಮನೆಯಿಂದ ಆಟ ಪ್ರಾರಂಭಿಸುವುದು.
- ಬಾಣದ ಗುರುತಿನಂತೆ ಸಾಗುವುದು.
- 1 ಮತ್ತು 2 ಸಂಖ್ಯೆ/ಚುಕ್ಕಿ ಇರುವ ದಾಳ ಬಳಸುವುದು.
- ಆಟದ ಫಲಕದ ಮೇಲೆ ಕಲ್ಲು ಅಥವಾ ಮಣಿಗಳನ್ನು ಇಡುವುದು.
- ಡೈಸ್ ಹಾಕಿದಾಗ ಬೀಳುವ ಸಂಖ್ಯೆಗನುಗುಣವಾಗಿ ಮಣಿ ನಡೆಸುವುದು.
- ಸಿಗುವ ಪದಗಳಿಗೆ ಶಬ್ದಕೋಶದ ಸಹಾಯದಿಂದ ಅರ್ಥ ಹುಡುಕುವುದು.





ಒಲವು	ಹಯ	ಅರಿ	ಬೇಡು	
ಆಲಿಸು	ರೋದನ	ನೇತ್ರ	ನಮನ	ತಂಗಾಳಿ
ಕೊರಗು	ನವ	ಧನ	ಕಾನನ	ಶಶಿ
ಧರೆ	ನಲಿವು	ಇಳೆ	ದಾಹ	ಸ್ಮರಣೆ
	ಆರೈಕೆ	ಬಾನು	ಧರಿಸು	ಬೆದರು



@KTBS NOT TO BE REPUBLISHED

ಹುಡುಕಿದ ಪದಗಳ ಅರ್ಥವನ್ನು ಕೆಳಗೆ ನೀಡಿದ ಖಾಲಿ ಜಾಗದಲ್ಲಿ ಬರೆಯೋಣ.

_____	_____	_____	_____
_____	_____	_____	_____
_____	_____	_____	_____
_____	_____	_____	_____
_____	_____	_____	_____

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

7

7.7 ಪದ ಪೆಟ್ಟಿಗೆ

2

ಈ ಕಥೆಯಲ್ಲಿ ಕೆಂಪು ಬಣ್ಣದ ಪದಗಳಿಗೆ ಶಬ್ದಕೋಶದ ಸಹಾಯದಿಂದ ಅರ್ಥ ಹುಡುಕಿ ಬರೆಯೋಣ.

ಸೋಮನಹಳ್ಳಿ ರೈತ

ಸೋಮನಹಳ್ಳಿ ಎಂಬ ಊರಿನಲ್ಲಿ ರಮೇಶ ಮತ್ತು ಗೀತಾ ಎಂಬ ದಂಪತಿಗಳಿದ್ದರು. ಅವರಿಗೆ ಜಮೀನಿನಲ್ಲಿ ಒಳ್ಳೆಯ ಬೆಳೆ ಬರುತ್ತಿತ್ತು. ಬೇಸಾಯದ ಕೆಲಸಗಳನ್ನೆಲ್ಲಾ ಆಳುಗಳೇ ಮಾಡುತ್ತಿದ್ದರು. ಒಳ್ಳೆಯ ಸಂಪಾದನೆ ಆಗುತ್ತಿತ್ತು. ದಂಪತಿಗಳು ಸುಖವಾಗಿ ಖುಷಿಯಿಂದ ಜೀವನ ನಡೆಸುತ್ತಿದ್ದರು. ಹಲವು ದಿನಗಳ ನಂತರ ಹೊಲದಲ್ಲಿ ಬೆಳೆ ಕಡಿಮೆಯಾಗುತ್ತಾ ಬಂದಿತು. ಇವರಿಗೆ ಜೀವನ ನಡೆಸಲು ಕಷ್ಟವಾಯಿತು. ಆಳುಗಳಿಗೆ ಸಂಬಳ ಕೊಡಲಾಗದೆ ಸಾಲ ಮಾಡಿದರು.

ಆಗ ರಮೇಶ ತನ್ನ ಹೊಲದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ತನ್ನ ಹೆಂಡತಿಯೊಂದಿಗೆ ತಾನೇ ಹೊಲದಲ್ಲಿ ಕೆಲಸ ಮಾಡಲು ಆರಂಭಿಸಿದನು. ಗೊಬ್ಬರ, ಉತ್ತಮ ಬೀಜಗಳು ಹಾಗೂ ನೀರಿನ ವ್ಯವಸ್ಥೆಯಿಂದ ಬೇಸಾಯ ಮಾಡಿದನು. ಭೂಮಿಯ ಫಲವತ್ತತೆ ಹೆಚ್ಚಿ ಇಳುವರಿ ಹೆಚ್ಚಾಯಿತು. ಪುನಃ ದಂಪತಿಗಳು ಸುಖವಾಗಿ ಬಾಳಲು ಪ್ರಾರಂಭಿಸಿದರು.

@KTBS NOT TO BE REPUBLISHED



ಕೆಂಪು ಬಣ್ಣದ ಪದಗಳು ಮತ್ತು ಅರ್ಥ

_____ = _____

_____ = _____

_____ = _____

_____ = _____

_____ = _____

_____ = _____

_____ = _____

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

7

7.8 ಪ್ರಾಸಗೀತೆ ರಚಿಸು

2T

ಸುಳಿವು ಪದಗಳನ್ನು ಗಮನಿಸಿ ಪ್ರಾಸಗೀತೆಯನ್ನು ಪೂರ್ಣಗೊಳಿಸೋಣ.

ನಲಿಯೋಣ, ಹೋಗೊಣ, ಬರೆಯೋಣ, ಮಾಡೋಣ, ಕುಣಿಯೋಣ, ಹೋಗೋಣ

ಶಾಲೆಗೆ ನಾವು _____

ಅ ಆ ಇ ಈ _____

ಹಾಡನು ಹಾಡುತ _____

ಮಧ್ಯಾಹ್ನ ಊಟವ _____

ಆಟ ಆಡಿ _____

ಸಂಜೆಯ ಮನೆಗೆ _____



@KTBOOKS NOT TO BE REPUBLISHED

ಬಿಟ್ಟ ಸ್ಥಳವನ್ನು ಸರಿಯಾದ ಪದಗಳಿಂದ ತುಂಬೋಣ.

ಆನೆ ಕುದುರೆ, ಹಕ್ಕಿ ಹಾಗೆ, ಉಯ್ಯಾಲೆ, ರೈಲಿನ ಆಟ, ಜಾರುಬಂಡಿ,



_____ ಜಾರೋಣ

_____ ತೂಗೋಣ

_____ ಆಡೋಣ

_____ ಹತ್ತೋಣ

_____ ಹಾರೋಣ

7

7.9 ಪ್ರಾಸಗೀತೆ ರಚಿಸು

3


'ಬ' ಪಟ್ಟಿಯ ಸರಿ ಉತ್ತರಗಳಿಂದ 'ಅ' ಪಟ್ಟಿಗೆ ಪ್ರಾಸ ಪದ್ಯ ರಚಿಸೋಣ.

ಅ		ಬ
ಕರಡಿ ಬೆಟ್ಟ ಹತ್ತಿತು _____ ಹಲಸಿನ ಮರ ಏರಿತು. _____ ತೊಳೆ ಬಿಡಿಸಿ ಇಟ್ಟಿತು _____ ಹೊಟ್ಟೆ ಬಿರಿ ತಿಂದಿತು _____		ಮಲಗಿ ನಿದ್ದೆ ಹೊಡೆಯಿತು, ಅತ್ತ ಇತ್ತ ನೋಡಿತು, ಅದಕೆ ಜೇನು ಬೆರೆಸಿತು, ಹಣ್ಣು ಕಿತ್ತು ತಂದಿತು

@KTBS NOT TO BE REPUBLISHED

ನಮ್ಮ ಮನೆ ಬಾಗಿಲು
ಅಗಲವಿದೆ ನೋಡಲು
_____
_____
ಕಂಬ ಕಂಬ ಸಾಲು
ಮುಟ್ಟಿ ಆಡಲು
_____
_____

ದೊಡ್ಡ ದೊಡ್ಡ ಪಡಶಾಲೆ
ಆಡಿ ಆಡಿ ಆಟ
ಬೆಳಕ ಕಿಂಡಿ ಮೇಲೆ
ಅಡುಗೆ ಮನೆಯಲಿ ಊಟ



- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

7

7.10 ಚಿತ್ರ ನೋಡಿ ಪದ್ಯ ಬರೆ

3T

ಸುಳಿವು ಪದಗಳನ್ನು ಬಳಸಿಕೊಂಡು ಚಿತ್ರಕ್ಕೆ ಕಿರು ಪದ್ಯ ರಚಿಸೋಣ.



ಸುಳಿವು ಪದಗಳು:

ಮಳೆ, ಭೂಮಿ, ಬೆಳೆಯಿತು, ಬೆಳೆ, ಹೊಳೆ, ಕಳೆ, ಸುರಿಯಿತು, ಹರಿಯಿತು, ತಂಪಾಯಿತು, ಚಿಗುರಿತು,

ಮಾದರಿ: ಮಳೆ ಸುರಿಯಿತು.

_____

_____

_____

_____

@KTBS NOT TO BE REPUBLISHED



ಸುಳಿವು ಪದಗಳು:

ರೆಕ್ಕೆ, ಹಕ್ಕಿ, ಗೂಡು, ಬಡಿಯಿತು, ಹಾರಿತು, ಸೇರಿತು, ತಿಂದಿತು, ಕಾಳು, ಹೆಕ್ಕಿತು, ಹಂಚಿ.

_____

_____

_____

_____

_____

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

7

7.11 ಚಿತ್ರಕ್ಕೊಂದು ಪದ್ಯ ರಚಿಸು

3

ಚಿತ್ರಗಳನ್ನು ಗಮನಿಸಿ, ಪದ್ಯ ರಚಿಸೋಣ ಮತ್ತು ಶೀರ್ಷಿಕೆ ಕೊಡೋಣ.





@TBS NOT TO BE REPUBLISHED

- ನನಗೆ ಅರ್ಥವಾಗಿದೆ
- ನನಗೆ ಸಹಾಯ ಬೇಕಿದೆ

ಶಿಕ್ಷಕರ ಸಹಿ :

ದಿನಾಂಕ :

7

7.12 ಯೋಜನೆ

3



ಪತ್ರಿಕೆಯಲ್ಲಿ ಪ್ರಕಟಿಸಿರುವ ಮಕ್ಕಳ ಕಿರು ಪದ್ಯಗಳಲ್ಲಿ ಯಾವುದಾದರೂ ಒಂದನ್ನು ಆರಿಸಿ ಈ ಖಾಲಿ ಜಾಗದಲ್ಲಿ ಬರೆಯೋಣ.

@KTBS
NOT TO BE REPUBLISHED

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐


ಶಿಕ್ಷಕರ ಸಹಿ :
ದಿನಾಂಕ :

7

7.13 ಕಾಮನ ಬಿಲ್ಲು

3

1. ಈಗಾಗಲೇ ಕಲಿತಿರುವ ಪದಗಳಲ್ಲಿ ಇಷ್ಟವಾದ ಪದಗಳನ್ನು ಇಲ್ಲಿ ಬರೆಯೋಣ.



ಅದಲು ಬದಲಾಗಿರುವ ಪದಗಳನ್ನು ಸರಿಯಾಗಿ ಜೋಡಿಸಿ ಅರ್ಥಪೂರ್ಣ ವಾಕ್ಯ ರಚಿಸೋಣ.

ಅ) ನಮ್ಮ/ ಚಂದ /ಶಾಲೆ./ ಚಂದಕ್ಕಿಂತ

_____

ಆ) ನಾಡು/ ಕನ್ನಡ /ಬೀಡು./ ಚಂದದ

_____

ಇ) ಭೂಷಣ. /ವಿನಯವೇ /ವಿದ್ಯೆಗೆ

_____

ಈ) ಪವಿತ್ರವಾದ/ ಗೆಳೆತನವು /ಸಂಬಂಧ.

_____

✦ ನನಗೆ ಅರ್ಥವಾಗಿದೆ	
✦ ನನಗೆ ಸಹಾಯ ಬೇಕಿದೆ	

ಶಿಕ್ಷಕರ ಸಹಿ :
ದಿನಾಂಕ :

@KTBS NOT TO BE REPUBLISHED

7

7.13 ಕಾಮನ ಬಿಲ್ಲು

ಮುಂದುವರೆದಿದೆ...

3

3. ಕೊಟ್ಟಿರುವ ಪದದ ಕೊನೆಯ ಅಕ್ಷರದಿಂದ ಅಂತ್ಯಾಕ್ಷರ ಪದ ಸರಣಿಯನ್ನು ರಚಿಸೋಣ.

ಫಲಕ	→	→	→
→	→	→	→
→	→	→	→
→	→	→	→

4. ಈಗಾಗಲೇ ಕಲಿತಿರುವ ಪದಗಳನ್ನು ಉಕ್ತಲೇಖನ ತೆಗೆದುಕೊಳ್ಳೋಣ.

_____	_____	_____
_____	_____	_____
_____	_____	_____
_____	_____	_____
_____	_____	_____
_____	_____	_____
_____	_____	_____
_____	_____	_____

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

@KTBS NOT TO BE REPUBLISHED

8

8.1 ನಾನೂ ಮಾತನಾಡುವೆ

2T

ಚಿತ್ರದ ಕುರಿತು ಗೆಳೆಯರೊಂದಿಗೆ ಹಂಚಿಕೊಳ್ಳೋಣ.



© NOT TO BE REPUBLISHED

ಮಾತನಾಡುವಾಗ ಗಮನಿಸಬೇಕಾದ ಅಂಶಗಳು:

1. ಇದು ಯಾವ ಸನ್ನಿವೇಶ?
2. ಈ ಚಿತ್ರದಲ್ಲಿ ಏನು ನಡೆಯುತ್ತಿರಬಹುದು? ಅವರ ಸಂಭಾಷಣೆಯನ್ನು ಊಹಿಸುವೆಯಾ?
3. ತರಕಾರಿ ಮಾರುಕಟ್ಟೆಯಲ್ಲಿ ಯಾವೆಲ್ಲಾ ಶಬ್ದಗಳನ್ನು ನೀವು ಕೇಳುವಿರಿ ? ಯೋಚಿಸಿ ಹೇಳಿ.

ಹೀಗೆ ಮಾಡಿ: ಶಿಕ್ಷಕರ ನೆರವಿನೊಂದಿಗೆ ಸ್ನೇಹಿತರೆಲ್ಲಾ ಸೇರಿ ಮಕ್ಕಳ ಸಂತೆ ನಡೆಸಿರಿ.


ನನ್ನ ಮಾತುಗಳಿಗೆ ನಾನು ಬಣ್ಣ ಹಚ್ಚುವ ಸ್ಟಾರ್‌ಗಳು

8

8.2 ಕಥೆ ಓದು


2T

ಈ ಪಠ್ಯವನ್ನು ಓದಿ ಅರ್ಥೈಸಿಕೊಳ್ಳೋಣ. ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸೋಣ.



ಒಂದು ಊರಿನಲ್ಲಿ ಒಂದು ಕೋಳಿ
ಇತ್ತು. ಅದಕ್ಕೆ ಎರಡು ಮರಿಗಳಿದ್ದವು.
ಒಂದು ಮರಿಗೆ ಕೆಂಪು ಮರಿ
ಇನ್ನೊಂದು ಮರಿಗೆ ಹಳದಿಮರಿ
ಎಂದು ಹೆಸರಿಡಲಾಗಿತ್ತು. ಹಳದಿಮರಿ
ಹಳದಿ ಇರುವ ಆಹಾರವನ್ನು
ತಿನ್ನುತ್ತಿತ್ತು.

ಕೆಂಪು ಮರಿ ಕೆಂಪು ಇರುವ
ಆಹಾರವನ್ನು ಹುಡುಕಿ ತಿನ್ನುತ್ತಿತ್ತು.
ಒಂದು ದಿನ ಕೆಂಪು ಮರಿ ಹಸಿರು
ಗಿಡದಲ್ಲಿ ಕೆಂಪು ಮೆಣಸಿನಕಾಯಿಯನ್ನು
ತಿಂದಿತು. ಕೆಂಪು ಮರಿ ಬಾಯಿ ಖಾರ
ಆಗಿ ಅಳತೊಡಗಿತು.



ಇದನ್ನು ಗಮನಿಸಿದ
ಹಳದಿ ಕೋಳಿಮರಿ ನೀನು
ಏಕೆ ಅಳುತ್ತಿರುವೇ?
ಎಂದು ಕೇಳಿತು. ಆಗ
ಕೆಂಪು ಕೋಳಿಮರಿ
ಹಸಿರು ಗಿಡದಲ್ಲಿ ಕೆಂಪು
ಮೆಣಸಿನಕಾಯಿ ತಿಂದಿದ್ದೇನೆ.
ಅದಕ್ಕೆ ನನಗೆ ಖಾರ
ಆಗಿದೆ ಎಂದು ಪುನಃ
ಅಳತೊಡಗಿತು.

@KTBS NOT TO BE REPUBLISHED


8

8.2 ಕಥೆ ಓದು

ಮುಂದುವರೆದಿದೆ...

2T

ಆಗ ಹಳದಿ ಕೋಳಿ ಮರಿಯು ತನ್ನ ತಾಯಿ ಬಳಿ ಹೋಗಿ ಕೆಂಪು ಕೋಳಿ ಮರಿಗೆ ಖಾರ ಆಗಿರುವ ವಿಷಯವನ್ನು ಹೇಳಿತು. ಇದನ್ನು ಕೇಳಿದ ಕೋಳಿಯು ಹಳದಿಬಣ್ಣದ ಸಿಹಿ ಬೂಂದಿ ಕಾಳುಗಳನ್ನು ತಿನ್ನಲು ತಂದು ಕೊಟ್ಟಿತು.



ಆಗ ಕೆಂಪು ಮರಿ ಸಿಹಿ ಬೂಂದಿ ಕಾಳುಗಳನ್ನು ತಿಂದು ಅಳುವುದನ್ನು ನಿಲ್ಲಿಸಿತು. ಆಗ ತಾಯಿ ಕೋಳಿ ಮರಿ ಈ ಎರಡು ಮರಿಗಳನ್ನು ತನ್ನ ರೆಕ್ಕೆಯಿಂದ ಅಪ್ಪಿಕೊಂಡಿತು.

NOT TO BE REPUBLISHED

8

8.2 ಕಥೆ ಓದು

ಮುಂದುವರೆದಿದೆ...

2T

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸೋಣ.

1) ಓದಿದ ಕಥೆಗೊಂದು ಹೆಸರು ಕೊಡೋಣ.

_____

2) ಕೆಂಪು ಮತ್ತು ಹಳದಿ ಮರಿಗಳು ಬಿಳಿ ಮತ್ತು ಹಸಿರು ಬಣ್ಣದ ಆಹಾರ ಇಷ್ಟಪಡುತ್ತಿದ್ದರೆ ಅವುಗಳ ಹೆಸರು ಏನಾಗುತ್ತಿತ್ತು ?

_____

3) ಬಿಳಿ ಮತ್ತು ಹಸಿರು ಬಣ್ಣದ ಆಹಾರ ಇಷ್ಟಪಡುತ್ತಿದ್ದರೆ ಯಾವ ಯಾವ ಆಹಾರ ತಿನ್ನುತ್ತಿದ್ದವು ?

_____

4) ನೀವು ಊಟ ಮಾಡುವಾಗ ನಿಮಗೆ ಬಹಳ ಖಾರವಾದರೆ ನೀವೇನು ಮಾಡುತ್ತೀರಿ ?

_____

5) ಹಳದಿ ಸಿಹಿಬೂಂದಿ ಕಾಳುಗಳನ್ನು ತಿನ್ನುವ ಬದಲು ಇನ್ನು ಏನನ್ನು ತಿನ್ನಬಹುದಿತ್ತು?

_____

6) ತಾಯಿ ಕೋಳಿ ಎರಡೂ ಮರಿಗಳನ್ನು ಅಪ್ಪಿಕೊಂಡು ಏನೆಂದು ಹೇಳಿರಬಹುದು ?

_____

_____

©KTBS NOT TO BE REPUBLISHED

✦ ನನಗೆ ಅರ್ಥವಾಗಿದೆ	☐
✦ ನನಗೆ ಸಹಾಯ ಬೇಕಿದೆ	☐

ಶಿಕ್ಷಕರ ಸಹಿ :
ದಿನಾಂಕ :

8

8.3 ಕಥೆ ಓದು

2T



ಕೊಟ್ಟಿರುವ ಕಥಾಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸೋಣ.

ಒಮ್ಮೆ ಒಬ್ಬ ರೈತನು ಸಂತೆಗೆ ಹೋಗಿದ್ದನು. ಮಕ್ಕಳಿಗೆ ಮಿಠಾಯಿಕೊಳ್ಳಲೆಂದು ಅಂಗಡಿಗೆ ಹೋದನು. ಒಂದು ಕೆ.ಜಿ ಮಿಠಾಯಿ ಕೊಡುವಂತೆ ಅಂಗಡಿಯವನಿಗೆ ರೈತನು ಕೇಳಿದನು. ಆಗ ಅಂಗಡಿಯವನು ಸರಿಯಾಗಿ ತೂಗದೆ ಕಡಿಮೆ ತೂಕದಲ್ಲಿ ಕೊಟ್ಟನು. ಜಾಣನಾದ ರೈತನು "ನೀನು ಕಡಿಮೆ ತೂಕದ ಮಿಠಾಯಿ ಕೊಟ್ಟೆಯಲ್ಲಾ ಏಕೆ?" ಎಂದು ಕೇಳಿದನು. ಆಗ ಅಂಗಡಿಯವನು "ಅದಕ್ಕೇಕೆ ಚಿಂತೆ? ನಿನಗೆ ಭಾರ ಕಡಿಮೆ ಆಗುವುದಿಲ್ಲವೇ?" ಎಂದು ಹೇಳಿದನು. ಆಗ ರೈತನು ಒಮ್ಮೆ ಯೋಚಿಸಿ, ಹಣ ಕೊಡುವಾಗ ಒಂದು ರೂಪಾಯಿ ಕಡಿಮೆ ಕೊಟ್ಟನು. "ಏನಪ್ಪಾ..., ಒಂದು ರೂಪಾಯಿ ಕಡಿಮೆ ಕೊಟ್ಟೆಯಲ್ಲ ?" ಎಂದು ಅಂಗಡಿಯವನು ಕೇಳಿದನು. ಆಗ ರೈತನು "ಅದಕ್ಕೇಕೆ ಚಿಂತೆ? ನಿನಗೆ ಎಣಿಸಲು ತೊಂದರೆ ಆಗಬಾರದಲ್ಲ, ಅದಕ್ಕೆ ಕಡಿಮೆ ಕೊಟ್ಟಿದ್ದೇನೆ." ಎಂದು ಹೇಳಿ ಹೊರಟು ಹೋದನು.

1. **ಯಾರು ಯಾರ ನಡುವೆ ಚರ್ಚೆ ನಡೆಯುತು?**

_____

_____

2. **ಮಿಠಾಯಿ ಕಡಿಮೆ ಕೊಟ್ಟ ಅಂಗಡಿಯವನು ರೈತನಿಗೆ ಏನೆಂದು ಉತ್ತರ ಕೊಟ್ಟನು?**

_____

_____

3. **ಹಣ ಕಡಿಮೆ ಕೊಟ್ಟ ರೈತನು ಅಂಗಡಿಯವನಿಗೆ ಏನೆಂದು ಉತ್ತರ ಕೊಟ್ಟನು?**

_____

_____

@KTBS NOT TO BE REPUBLISHED

✦ ನನಗೆ ಅರ್ಥವಾಗಿದೆ ☐ ✦ ನನಗೆ ಸಹಾಯ ಬೇಕಿದೆ ☐	ಶಿಕ್ಷಕರ ಸಹಿ : ದಿನಾಂಕ :

8

8.4 ಕಥೆ ಸರಿಪಡಿಸು

3



ಕೊಟ್ಟ ಕಥೆಯ ವಾಕ್ಯಗಳನ್ನು ಓದೋಣ. ಕಥೆಗನುಗುಣವಾಗಿ ವಾಕ್ಯಗಳಿಗೆ ಕ್ರಮಸಂಖ್ಯೆಯನ್ನು ಹಾಕೋಣ.

ವಾಕ್ಯಗಳು	ಕ್ರಮ ಸಂಖ್ಯೆ
ಕಪ್ಪೆಯು ಛಂಗನೆ ನದಿಯಲ್ಲಿ ಜಿಗಿದು ನೀರಿನಲ್ಲಿ ಈಜಲು ಪ್ರಾರಂಭಿಸಿತು.	
ಒಂದು ಕಪ್ಪೆ, ಕೋಳಿಮರಿ, ಇಲಿ, ಇರುವೆ ಮತ್ತು ಜಿರಳೆ 5 ಜನ ಸ್ನೇಹಿತರು ಇದ್ದರು.	
ಎಲ್ಲರೂ ಸೇರಿ ಒಂದು ದಿನ ಪಕ್ಕದ ಊರಿಗೆ ಪ್ರವಾಸ ಹೊರಟರು. ಹೋಗುವಾಗ ದಾರಿಯಲ್ಲಿ ದೊಡ್ಡದೊಂದು ನದಿ ಅಡ್ಡ ಬಂತು.	
ಕಪ್ಪೆಯು ಉಳಿದವರಿಗೆ ಈಜಲು ಬರುವುದಿಲ್ಲವೆಂದು ಗಹಗಹಿಸಿ ನಗುತ್ತಿತ್ತು. ಇದರಿಂದ ಎಲ್ಲರಿಗೂ ಬೇಸರವಾಯಿತು.	
ಕೋಳಿಮರಿಯು ನಾವೆಲ್ಲ ಒಂದು ದೋಣಿಯನ್ನು ಕಟ್ಟಿ ನದಿ ದಾಟಬಹುದೆಂದು ಹೇಳಿತು.	
ಇಲಿಯು ಮರದ ತೊಗಟೆಯನ್ನು ಕತ್ತರಿಸಿ ತಂದಿತು.	
ಕೋಳಿಮರಿಯು ತನ್ನ ಕೊಕ್ಕಿನಿಂದ ದೊಡ್ಡ ಮರದ ಎಲೆಯನ್ನು ಕಿತ್ತು ತಂದಿತು.	
ಎಲ್ಲರೂ ಸೇರಿ ಒಂದು ದೋಣಿಯನ್ನು ಕಟ್ಟಿ, ದೋಣಿಯಲ್ಲಿ ಕುಳಿತು ನದಿಯನ್ನು ದಾಟಿದರು.	
ಇದನ್ನು ದಾಟುವುದು ಹೇಗೆಂದು ಎಲ್ಲರೂ ಚಿಂತಿಸತೊಡಗಿದರು.	

@KTBS NOT TO BE REPUBLISHED

ಈ ಕಥೆಗೆ ಹೊಂದಿಕೆಯಾಗುವ ಆಶಯಕ್ಕೆ ✓ ಗುರುತು ಹಾಕೋಣ.

- ಒಗ್ಗಟ್ಟಿನಲ್ಲಿ ಬಲವಿದೆ.
- ಯಾರನ್ನೂ ಕಡೆಗಣಿಸಬಾರದು.
- ಪರಸ್ಪರ ಸಹಕಾರವಿದ್ದರೆ ಏನನ್ನೂ ಸಾಧಿಸಬಹುದು.
- ಕಷ್ಟದಲ್ಲಿರುವವರಿಗೆ ಸಹಾಯ ಮಾಡಬಾರದು.

8

8.5 ತೆಗೆ ಪುಸ್ತಕ ಹೊರಗೆ

3



ಓದುವ ಮೂಲೆ ಅಥವಾ ಗ್ರಂಥಾಲಯದಿಂದ ಇಷ್ಟವಾದ ಪುಸ್ತಕವನ್ನು ಓದಿ,
ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸೋಣ.

1) ನೀನು ಓದಿದ ಕಥಾ ಪುಸ್ತಕದ ಹೆಸರೇನು?

_____

_____

2) ನೀನು ಓದಿದ ಕಥೆಯಲ್ಲಿ ಬರುವ ಪಾತ್ರಗಳು ಯಾವುವು?

_____

_____

3) ಓದಿದ ಕಥೆಯಲ್ಲಿ ನಿನಗೆ ತುಂಬಾ ಇಷ್ಟವಾದ ಪಾತ್ರ ಯಾವುದು?

_____

_____

4) ನೀನು ಓದಿದ ಕಥೆಯಲ್ಲಿ ಬರುವ ಯಾವುದಾದರೊಂದು ಘಟನೆಯನ್ನು ಎರಡು ಸಾಲುಗಳಲ್ಲಿ ಬರೆ.

_____

_____

_____

@KTBS NOT TO BE REPUBLISHED

✦ ನನಗೆ ಅರ್ಥವಾಗಿದೆ	☐
✦ ನನಗೆ ಸಹಾಯ ಬೇಕಿದೆ	☐

ಶಿಕ್ಷಕರ ಸಹಿ :
ದಿನಾಂಕ :

8

8.6 ಅಣ್ಣನ ಗಾಲಿ ಕುರ್ಚಿ

3

ಈ ಕಥೆಯನ್ನು ಹಿರಿಯರೆದುರು ಓದೋಣ.



ನನ್ನಣ್ಣ ಗಾಲಿ ಕುರ್ಚಿಯಲ್ಲಿರುವಾಗ ಜೊತೆಯಲ್ಲಿ ನಾನಿರುತ್ತೇನೆ. ನೋಡಿದವರೆಲ್ಲ ಹೇಳುವುದು ನಾವು ತರಲೆ ಜೋಡಿಗಳೆಂದು. ನನ್ನಣ್ಣ ಗಾಲಿಯ ಎರಡೂ ಚಕ್ರಗಳಿಗೆ ನೀಲಿ, ಹಳದಿ, ಕೆಂಪು ಬಣ್ಣ ಹಚ್ಚಿದ್ದಾನೆ. ಆಗಾಗ ತಮಾಷೆಗೆ ಬಣ್ಣ ಬಣ್ಣದ ಬಲೂನುಗಳನ್ನು ಕಟ್ಟುತ್ತಾನೆ. ನನ್ನಣ್ಣ ತುಂಬಾ ಜಾಣ. ಸಂಜೆ ನಾವು ಆಟವಾಡಲು ಪಾರ್ಕಿಗೆ ಹೋದಾಗಲೂ ದಾರಿ ಮಾಡಿಕೊಡಿ ಎಂದು ಪಾಂ ಪಾಂ ಸದ್ದು ಮಾಡುವನು.



ಅಣ್ಣನ ಜೊತೆ ಸಂತೆಗೆ ಹೋಗುವುದೇ ಮಜಾ. ಅಣ್ಣನ ಕುರ್ಚಿಗೆ ಹಿಂದೆ ಬರುವ ವಾಹನಗಳನ್ನು ನೋಡಲೆಂದೇ ಕನ್ನಡಿ ಇದೆ. ಆಗಾಗ ಅವನ ಕುರ್ಚಿಯಲ್ಲಿ ಅವನು ತೊರೆಯ ಬಳಿ ಹೋಗುತ್ತಾನೆ. ನಾನು ಅವನಿಗೆ ನೀರೆರಚುತ್ತೇನೆ. ಅಬ್ಬಾ! ಅವನ ಕೇಕೆ ಹೇಗಿರುತ್ತೆ ಗೊತ್ತಾ?



ಅಪ್ಪ ಮತ್ತು ಅಮ್ಮ ನಮ್ಮನ್ನು ಬೆಟ್ಟ ಹತ್ತಲು ಕರೆದುಕೊಂಡು ಹೋದಾಗ ಅದಕ್ಕೆಂದೇ ವಿಶೇಷ ಚಕ್ರಗಳನ್ನು ಗಾಲಿ ಕುರ್ಚಿಗೆ ಜೋಡಿಸಿಕೊಳ್ಳುವನು. ಅವನ ಜೊತೆ ಗಾಳಿಗೆ ಕೈಚಾಚುತ್ತಾ ಹೋಗುವುದೆಂದರೆ ಖುಷಿಯೋ ಖುಷಿ.

© KTBS NOT TO BE REPUBLISHED

ಉತ್ತರಿಸೋಣ:

1. ಅಣ್ಣ ತಂಗಿ ಜೊತೆಯಾಗಿ ಎಲ್ಲೆಲ್ಲಿ ಹೋಗುತ್ತಿದ್ದರು?

_____

2. ಗಾಲಿ ಕುರ್ಚಿಗೆ ಹೇಗೆ ಸಿಂಗಾರ ಮಾಡಿದ್ದಾರೆ?

_____


✦ ನನಗೆ ಅರ್ಥವಾಗಿದೆ ☐ ✦ ನನಗೆ ಸಹಾಯ ಬೇಕಿದೆ ☐	ಶಿಕ್ಷಕರ ಸಹಿ : ದಿನಾಂಕ :

8

8.7 ಕಾಮನ ಬಿಲ್ಲು

3

1. ಈಗಾಗಲೇ ಕಲಿತಿರುವ ಪದಗಳಲ್ಲಿ ಇಷ್ಟವಾದ ಪದಗಳನ್ನು ಇಲ್ಲಿ ಬರೆಯೋಣ.



2. ಇಲ್ಲಿ ನೀಡಿದ ಪದಗಳ ಅಕ್ಷರಗಳು ಬದಲಾಗಿವೆ. ಅವುಗಳನ್ನು ಸರಿಪಡಿಸಿ ಬರೆದು, ಓದೋಣ.

ಸ್ಸಂಜೆಮು	ಗ್ರಸಂಹ	ಕಷಿಕೃ
ರ್ವಅಪೂ	ಳಿರಿಕೋಮ	ಮಾರ್ಣವಲೆ

NOT TO BE REPUBLISHED @KTBS

- ನನಗೆ ಅರ್ಥವಾಗಿದೆ
- ನನಗೆ ಸಹಾಯ ಬೇಕಿದೆ

ಶಿಕ್ಷಕರ ಸಹಿ :
ದಿನಾಂಕ :

3. ಪದಜಾಲದಲ್ಲಿರುವ ಪದಗಳನ್ನು ಗುರುತಿಸಿ ಬರೆಯೋಣ.

ಅ	ಛಾ	ಓ	ವಿ	ಶ್ವಾ	ಸ
ಕ್ಷ	ಮೆ	ಲೈ	ಆ	ನ	ನ
ರ	ನ	ಸ	ಪ್ತ	ಮಿ	ಕ
ಪೀ	ಷ	ಅ	ಬೆ	ರ	ರ್ತ
ಸಂ	ಕ	ಲ್ಪ	ವಾ	ಯ	ವ್ಯ

4. ಈಗಾಗಲೇ ಕಲಿತಿರುವ ಪದಗಳನ್ನು ಉಕ್ತಲೇಖನ ತೆಗೆದುಕೊಳ್ಳೋಣ.

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

@KTBS NOT TO BE REPUBLISHED

9

9.1 ನಾನೂ ಮಾತನಾಡುವೆ

2T

ಚಿತ್ರ ಕುರಿತು ಗೆಳೆಯರೊಂದಿಗೆ ಹಂಚಿಕೊಳ್ಳೋಣ.



@KTBS NOT TO BE REPUBLISHED

ಮಾತನಾಡುವಾಗ ಗಮನಿಸಬೇಕಾದ ಅಂಶಗಳು:

1. ಈ ಚಿತ್ರದಲ್ಲಿ ಏನನ್ನು ಕಾಣುತ್ತಿದ್ದೀಯಾ?
2. ಮಹಾನಗರಗಳಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಲು ವ್ಯವಸ್ಥೆ ಮಾಡಿರುತ್ತಾರೆ. ಪಾರ್ಕಿಂಗ್ ಎಂದರೇನು? ಈ ಬಗ್ಗೆ ಶಿಕ್ಷಕರೊಂದಿಗೆ ಚರ್ಚಿಸು.
3. ಸೈಕಲ್‌ನಲ್ಲಿ ಯಾವ ಯಾವ ಭಾಗಗಳಿರುತ್ತವೆ? ಯೋಚಿಸಿ ಹೇಳು.

☛ ನನ್ನ ಮಾತುಗಳು ನನಗೆ ಸಂತೋಷ ನೀಡಿವೆ. ☐


☛ ನಾನು ಇನ್ನೂ ಸ್ವಲ್ಪ ವಿಷಯ ಸೇರಿಸಿದ್ದರೆ ಇನ್ನೂ ಖುಷಿ ಆಗುತ್ತಿತ್ತು. ☐

9

9.2 ಚಿತ್ರ ನೋಡು ಮಾತನಾಡು

2T

ಚಿತ್ರ ನೋಡೋಣ. ಪ್ರಶ್ನೆಗಳ ಸುಳಿವುಗಳನ್ನು ಗಮನಿಸಿ, ಘಟನೆಯನ್ನು ಊಹಿಸಿ ಹೇಳೋಣ.



1. ಈ ಸನ್ನಿವೇಶ ಎಲ್ಲಿ ನಡೆದಿರಬಹುದು?
2. ಇಲ್ಲಿ ಯಾರು ಯಾರು ಇದ್ದಾರೆ?
3. ವಿದ್ಯಾರ್ಥಿನಿಯ ಕೈಯಲ್ಲಿ ಏನಿದೆ?
4. ಆಕೆ ಶಾಲೆಗೆ ಏಕೆ ತಡವಾಗಿ ಬಂದಿರಬಹುದು?
5. ಶಿಕ್ಷಕರು ಏಕೆ ಚಪ್ಪಾಳೆ ತಟ್ಟಿರಬಹುದು?
6. ನೀವು ಅನಿವಾರ್ಯ ಕಾರಣಗಳಿಂದ ಎಂದಾದರೂ ಶಾಲೆಗೆ ತಡವಾಗಿ ಬಂದಿದ್ದೀರಾ?
7. ಶಾಲೆಗೆ ತಡವಾಗಿ ಬಂದಿದ್ದರೆ ಕಾರಣಗಳನ್ನು ತಿಳಿಸಿ.

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

© KTBS NOT TO BE REPUBLISHED


9

9.3 ಚಿತ್ರ ನೋಡು–ಕಥೆ ರಚಿಸು

2T

ಚಿತ್ರ ಸರಣಿಯನ್ನು ನೋಡಿ ಈ ಕಥೆಯನ್ನು ಊಹಿಸಿ ಹಿರಿಯರ ಮುಂದೆ ಹೇಳೋಣ.







© KTBS NOT TO BE REPUBLISHED

✦ ನನಗೆ ಅರ್ಥವಾಗಿದೆ	☐
✦ ನನಗೆ ಸಹಾಯ ಬೇಕಿದೆ	☐

ಶಿಕ್ಷಕರ ಸಹಿ :
ದಿನಾಂಕ :

9

9.4 ಕಥೆ ಊಹಿಸು

3

ಈ ಸನ್ನಿವೇಶವನ್ನು ನೋಡಿ ಏನು ನಡೆಯುತ್ತಿದೆ ಎಂಬುದನ್ನು ಊಹಿಸಿ ಹಿರಿಯರ ಮುಂದೆ ಹೇಳೋಣ.



1. ಚಿತ್ರವನ್ನು ಗಮನಿಸು. ಇವರು ಏನು ಮಾಡುತ್ತಿದ್ದಾರೆ?

_____

2. ಇದು ಯಾವ ಸಮಾರಂಭಕ್ಕಾಗಿ ಇರಬಹುದು?

_____

✦ ನನಗೆ ಅರ್ಥವಾಗಿದೆ	☐
✦ ನನಗೆ ಸಹಾಯ ಬೇಕಿದೆ	☐

ಶಿಕ್ಷಕರ ಸಹಿ :
ದಿನಾಂಕ :

9

9.5 ಮುಂದೇನು...?

ಚಿತ್ರ ಸರಣಿಯ ಮುಂದಿನ ಭಾಗವನ್ನು ರಚಿಸೋಣ. ಅದನ್ನು ಸ್ನೇಹಿತರು ಅಥವಾ ಹಿರಿಯರ ಮುಂದೆ ಹೇಳೋಣ.







@KTBS NOT TO BE REPUBLISHED

ಮುಂದೇನಾಗಬಹುದು? ಎಂಬುದನ್ನು ಊಹಿಸಿ ಖಾಲಿ ಜಾಗದಲ್ಲಿ ಕಥೆಯನ್ನು ಬರೆಯೋಣ.

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

9

9.6 ನನ್ನ ಕಥೆ

3

ನೀಡಿರುವ ಚಿತ್ರ ಸುಳಿವುಗಳನ್ನು ಬಳಸಿ ಕಥೆ ಕಟ್ಟೋಣ. ಅದನ್ನು ಬರೆದು ಸ್ನೇಹಿತರು ಅಥವಾ ಹಿರಿಯರ ಮುಂದೆ ಹೇಳೋಣ. ಶೀರ್ಷಿಕೆ ನೀಡೋಣ.



NOT TO BE REPUBLISHED @KTBS

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

9

9.7 ಕಥೆ ಕಟ್ಟುವ ಸಮಯ

3



ಪ್ರತಿಯೊಬ್ಬರು ಒಂದೊಂದು ವಾಕ್ಯ ಹೇಳುತ್ತಾ ಕಥೆ ರಚಿಸೋಣ.
ಅದಕ್ಕೊಂದು ಶೀರ್ಷಿಕೆ ನೀಡೋಣ.

@KTBS
NOT TO BE REPUBLISHED

(ಸುಗಮಕಾರರು ಸಾಮೂಹಿಕವಾಗಿ ಸರದಿಯ ಪ್ರಕಾರ ಮಕ್ಕಳಿಂದ ಒಂದೊಂದು ವಾಕ್ಯಗಳನ್ನು ಹೇಳಿಸುತ್ತಾ ಕಥೆ ರಚಿಸಲು ಅನುಕೂಲಿಸುವುದು)

9

9.8 ಕಾಮನಬಿಲ್ಲು

3

1. ಪದಜಾಲದಲ್ಲಿ ಕೆಲವು ಪ್ರಾಣಿಗಳು ಮತ್ತು ಪಕ್ಷಿಗಳ ಹೆಸರುಗಳು ಅಡಗಿ ಕುಳಿತಿವೆ. ಅವುಗಳನ್ನು ಹುಡುಕಿ ಬರೆಯೋಣ.

ಆ	ಮೆ	ನ	ಚಿ	ಶ್ವಾ	ಬೆ
ನಾ	ಗಿ	ವಿ	ಮೊ	ಲ	ಕ್ಕು
ಅ	ಳಿ	ಲು	ತೆ	ನಾ	ಯಿ
ಪೀ	ಷ	ಅ	ಹು	ರ	ರ್ಜ
ಕೊ	ಕ್ಕ	ರೆ	ಲಿ	ಯ	ವ್ಯ

2. ಶಬ್ದಕೋಶ ಬಳಸಿ ನೀಡಿದ ಪದಗಳ ಅರ್ಥ ಬರೆಯೋಣ.

ಬಾನು →		ಭಾನು →	
ಸಮರ →		ಅಮರ →	
ಚರಣ →		ಚಾರಣ →	
ಪದ →		ನದ →	
ಶಿಕ್ಷೆ →		ರಕ್ಷೆ →	
ಹೊತ್ತು →		ಹೊತ್ತಿಗೆ →	

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

@KSEEBS NOT TO BE REPUBLISHED

3. ನೀಡಿರುವ ಚಿತ್ರಕ್ಕೊಂದು ವಾಕ್ಯ ಬರೆಯೋಣ.

@KTBS
NOT TO BE REPUBLISHED

4. ಅದಲು ಬದಲಾಗಿರುವ ಪದಗಳನ್ನು ಸರಿಯಾಗಿ ಜೋಡಿಸಿ ಅರ್ಥಪೂರ್ಣ ವಾಕ್ಯ ರಚಿಸೋಣ.

ಅ) ಬಾಯಿ / ಕೆಸರಾದರೆ / ಕೈ / ಮೊಸರು.

_____

ಆ) ಇದ್ದಷ್ಟು / ಚಾಚು / ಹಾಸಿಗೆ / ಕಾಲು

_____

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

10

10.1 ನಾನೂ ಮಾತನಾಡುವೆ

2T

ಚಿತ್ರ ಕುರಿತು ಗೆಳೆಯರೊಂದಿಗೆ ಹಂಚಿಕೊಳ್ಳೋಣ.



NOT TO BE REPUBLISHED

ಮಾತನಾಡುವಾಗ ಗಮನಿಸಬೇಕಾದ ಅಂಶಗಳು:

- ಚಿತ್ರದಲ್ಲಿ ಏನೇನು ಕಾಣುತ್ತಿರುವೆ?
- ಸಮುದ್ರದಲ್ಲಿ ಸಂಚರಿಸುವ ವಾಹನಗಳ ಕುರಿತು ಮಾತನಾಡು.
- ಸಮುದ್ರದ ಬಗ್ಗೆ ನಿನಗೆ ತಿಳಿದಂತೆ ಮಾತನಾಡು.

ನನ್ನ ಮಾತುಗಳಿಗೆ ನಾನು ಬಣ್ಣ ಹಚ್ಚುವ ಸ್ಟಾರ್‌ಗಳು

10


10.2 ಚಿತ್ರ ನೋಡು ಕಥೆ ಹೇಳು

2T

ಚಿತ್ರದಲ್ಲಿರುವ ಘಟನೆಯನ್ನು ಗೆಳೆಯರೊಂದಿಗೆ ಹಂಚಿಕೊಳ್ಳೋಣ.









@KTBS NOT TO BE REPUBLISHED

10

10.2 ಚಿತ್ರ ನೋಡು ಕಥೆ ಹೇಳು


ಮುಂದುವರೆದಿದೆ...


2T

ಚಿತ್ರದಲ್ಲಿರುವ ಘಟನೆಯನ್ನು ಗೆಳೆಯರೊಂದಿಗೆ ಹಂಚಿಕೊಳ್ಳೋಣ.









@KTBS NOT TO BE REPUBLISHED

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

10

10.3 ಸರಿಪಡಿಸಿ ಬರೆ

3



ಪದಗಳನ್ನು ಅನುಕ್ರಮವಾಗಿ ಬರೆದು ವಾಕ್ಯ ರಚಿಸೋಣ.

ಬಿದ್ದವು. । ಸೋಪಾದ । ದಿಂಬುಗಳು । ಮೇಲಿನ । ಕೆಳಗೆ ।

ಅಜ್ಜಿ । ಇಲಿಯನ್ನು । ಮನೆಯಲ್ಲಿರುವ । ನೋಡಿದಳು.

ಹಾಸಿಗೆಯಡಿ । ನೋಡಿದ । ಇಲಿಯನ್ನು । ಬೆಕ್ಕು । ಅಡಗಿಕೊಂಡಿತು.

ಅಡಗಿಕೊಂಡಳು. । ಕೆಳಗೆ । ಮಂಚದ । ಇಲಿಯನ್ನು । ನೋಡಿ । ಅಮ್ಮನೂ

ಸೂಚನೆ: ವಾಕ್ಯಗಳನ್ನು ಆಧರಿಸಿ ಇಲಿಯು ಮಾಡುವ ಅವಾಂತರದ ಕುರಿತು ಬರೆಯೋಣ.

@KTBS NOT TO BE REPUBLISHED

✦ ನನಗೆ ಅರ್ಥವಾಗಿದೆ	☐
✦ ನನಗೆ ಸಹಾಯ ಬೇಕಿದೆ	☐


ಶಿಕ್ಷಕರ ಸಹಿ :
ದಿನಾಂಕ :


10


10.4 ಚಿತ್ರ ನೀನು–ವಾಕ್ಯ ನಾನು

2T

ಬದಲಾದ ಚಿತ್ರ ಗಮನಿಸೋಣ. ಸರಣಿ ಚಿತ್ರಗಳಿಗೆ ಅನುಕ್ರಮ ಸಂಖ್ಯೆ ನೀಡೋಣ.









@KTBS NOT TO BE REPUBLISHED


10


10.4 ಚಿತ್ರ ನೀನು–ವಾಕ್ಯ ನಾನು

ಮುಂದುವರೆದಿದೆ...

2T

ಬದಲಾದ ಚಿತ್ರ ಗಮನಿಸೋಣ. ಸರಣಿ ಚಿತ್ರಗಳಿಗೆ ಅನುಕ್ರಮ ಸಂಖ್ಯೆ ನೀಡೋಣ.









@KTBS NOT TO BE REPUBLISHED

10

10.4 ಚಿತ್ರ ನೀನು–ವಾಕ್ಯ ನಾನು

ಮುಂದುವರೆದಿದೆ....

2

ಸೂಚನೆ: ಹಿಂದಿನ ಪುಟಗಳ ಚಿತ್ರಗಳಿಗೆ ಸರಿಹೊಂದುವ ವಾಕ್ಯ ಆಯ್ದು ಅದೇ ಪುಟಗಳಲ್ಲಿ ಬರೆಯೋಣ.

- "ನಾನದನ್ನು ಹೊರಗೋಡಿಸುವೆ," ಎಂದು ಅಮ್ಮ ಧೈರ್ಯವಾಗಿ ಪೊರಕೆ ಕೈಗೆತ್ತಿಕೊಂಡು ಅಲ್ಲಲ್ಲಿ ಕೆದಕಿದಳು.
- ಇಲಿಯು ಸೋಫಾದ ಮೇಲೆ ಹಾರುತ್ತ, ಕಿಟಕಿ ಹತ್ತುತ್ತ, ಕೊನೆಗೆ ಬಾಗಿಲಿನಿಂದಾಚೆ ಓಡಿತು.
- ಅಜ್ಜಿಯು ಮನೆಯಲ್ಲಿ ಇಲಿಯನ್ನು ನೋಡಿದಳು."ಇಲಿ!" ಎಂದು ಕಿರುಚುತ್ತಾ ಸೋಫಾ ಹತ್ತಿದಳು.
- ಅಜ್ಜಿ, ಅಪ್ಪ, ಅಮ್ಮ, ಮಿಥುನ, ಬೆಕ್ಕು ಎಲ್ಲರೂ ಇಲಿ ನೋಡಿ ಮಂಚದ ಕೆಳಗೆ ಅಡಗಿಕೊಂಡರು.
- ಅಪ್ಪ ಕಿಟಕಿ ಏರುತ್ತಾ "ಎಲ್ಲಿ" ಎಂದು ಗಾಬರಿಯಿಂದ ಕಿಟಕಿಯ ಪರದೆಗಳನ್ನು ಎಳೆದು ಬೀಳಿಸಿದನು.
- ಇಲಿಯನ್ನು ನೋಡಿ ಮಗು ಕಿಲಕಿಲನೆ ನಗುತ್ತ ಚಪ್ಪಾಳೆ ತಟ್ಟಿತು.
- ಇಲಿಯು ಓಡಿ ಹೋಯಿತು. ಅದರ ಹಿಂದೆ ಮಗುವೂ ಸರಸರನೆ ಹೋಯಿತು.
- ಮಿಥುನನು ಬೆಕ್ಕಿಗೆ "ಇಲಿ ಹಿಡಿ" ಎಂದು ಹೇಳಿದ. ಆದರೆ ಇಲಿ ನೋಡಿದ ಬೆಕ್ಕು ಹಾಸಿಗೆಯಡಿ ಅಡಗಿಕೊಂಡಿತು.

@KTBS NOT TO BE REPUBLISHED

✦ ನನಗೆ ಅರ್ಥವಾಗಿದೆ	☐
✦ ನನಗೆ ಸಹಾಯ ಬೇಕಿದೆ	☐

ಶಿಕ್ಷಕರ ಸಹಿ :
ದಿನಾಂಕ :

10

10.5 ತಪ್ಪು ಸರಿಸು – ಸರಿ ಬೆರೆಸು

3

ಚಿತ್ರ ನೋಡಿ ತಪ್ಪು ವಾಕ್ಯವನ್ನು ಸರಿಪಡಿಸಿ ಖಾಲಿ ಜಾಗದಲ್ಲಿ ಬರೆಯೋಣ.




ಮನೆಯಲ್ಲಿ ಅಜ್ಜಿಯು ಇಲಿಯನ್ನು ನೋಡಿದನು ಅಜ್ಜಿ.



"ಎಲ್ಲಿ"? ಎಂದು ಕಿಟಕಿ ಏರುತ್ತಾ ಅಪ್ಪ ಕೇಳಿದಳು



"ಅದನ್ನು ಹಿಡಿ" ಎಂದು ಮಿಥುನನು ಮನೆಯ ಬೆಕ್ಕುಗಳಿಗೆ ಹೇಳಿದರು.



ಅಮ್ಮ ಧೈರ್ಯವಾಗಿ "ನಾನು ಅವುಗಳನ್ನು ಹೊರಗೋಡಿಸುವೆ", ಎಂದರು.

@KTBS NOT TO BE REPUBLISHED


10

10.5 ತಪ್ಪು ಸರಿಸು – ಸರಿ ಬೆರೆಸು


ಮುಂದುವರೆದಿದೆ...

3

ಚಿತ್ರ ನೋಡಿ ತಪ್ಪು ವಾಕ್ಯವನ್ನು ಸರಿಪಡಿಸಿ ಖಾಲಿ ಜಾಗದಲ್ಲಿ ಬರೆಯೋಣ.




ಅಜ್ಜಿಯೂ ಬೆಕ್ಕು ನೋಡಿ ಅಡಗಿಕೊಂಡರು
"ಮನೆಯಲ್ಲಿ! ಇಲಿ" ಎಂದು ಎಲ್ಲರೂ ಒಟ್ಟಿಗೆ ಕೂಗಿಕೊಂಡರು



ಈ ಗದ್ದಲಕ್ಕೆ ಮಗು ಎದ್ದು ಕಿಲಕಲನೆ ಅತ್ತು
ಚಪ್ಪಾಳೆ ತಟ್ಟಿತು



ಅದರ ಹಿಂದೆ ಇಲಿ ಸರಸರನೆ ಹೋಯಿತು.



ಕೊನೆಗೆ ಬಾಗಿಲೊಳಗೆ ಓಡಿತು.

@KTBS NOT TO BE REPUBLISHED

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :

10

10.6 ಕಥೆಯ ಸುತ್ತ ನನ್ನ ಚಿತ್ತ

3

ಚಿತ್ರ ನೋಡಿ, ಸುಳಿವುಗಳನ್ನು ಆಧರಿಸಿ ಕಥೆ ಪೂರ್ಣಗೊಳಿಸೋಣ.

ಮಗುವಿಗೆ ಅಂಜಿದ ಇಲಿಯು ಸರಸರನೆ ಓಡುತ್ತ..



_____


ಮತ್ತೆ ಕಿಟಕಿಯಿಂದ ಕೆಳಗಿಳಿದು..



_____

_____

ನಂತರ ಪಾತ್ರೆ ಬುಟ್ಟಿಯಿಂದ ಹೊರಬಂದು ಇಲಿಯು...



_____

ಪುನಃ ಹಗ್ಗದಿಂದ ಜಿಗಿದು...



_____

_____

ಲೋಟದೊಳಗಿಂದ ಹೊರಬಂದು...



_____

ಹಾಸಿಗೆಯಿಂದ ಹೊರ ಬಂದು

ಮೇಜಿನ ಕೆಳಗಡೆಯಿಂದ ಓಡಿತು. ಆಮೇಲೆ ಚೀಲಗಳ ಮೇಲೆ ಜಿಗಿದು, ಚಾಪೆಯ ಮೇಲೆ ಓಡಿ, ಕುರ್ಚಿಯ ಒಳಗಡೆಯಿಂದ ನುಸುಳಿಕೊಂಡು ಪುನಃ ಚಾಪೆಯ ಮೇಲೆ ಓಡುತ್ತಾ, ತಂಬಿಗೆಯ ಮೇಲೆ ಜಿಗಿದು, ಟಿವಿ ಇಟ್ಟಿರುವ ಮೇಜಿನ ಹತ್ತಿರದಿಂದ ನುಸುಳಿ ಕೊನೆಗೆ ಬಾಗಿಲಿನಿಂದಾಚೆ ಓಡಿತು.

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :
ದಿನಾಂಕ :


@KTBS NOT TO BE REPUBLISHED

10

10.7 ಚಿತ್ರ ನೋಡು ಕಥೆ ಬರೆ

3

ಚಿತ್ರ ನೋಡಿ ಕಥೆ ಬರೆಯೋಣ.





NOT TO BE REPUBLISHED © KTBS

10

10.7 ಚಿತ್ರ ನೋಡು ಕಥೆ ಬರೆ

ಮುಂದುವರೆದಿದೆ...

3

ಚಿತ್ರ ನೋಡಿ ಕಥೆ ಬರೆಯೋಣ.





© DSERT NOT TO BE REPUBLISHED

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

ಚಿತ್ರ ಗಮನಿಸಿ ಮುಂದುವರೆದ ಭಾಗವನ್ನು ಊಹಿಸಿ ಬರೆ.

ಪ್ರತಿಭಾ ಕಾರಂಜಿ ಸ್ಪರ್ಧೆ

ಅಂದು ಕ್ಲಸ್ಟರ್ ಮಟ್ಟದ 'ಪ್ರತಿಭಾ ಕಾರಂಜಿ ಸ್ಪರ್ಧೆ' ಏರ್ಪಡಿಸಲಾಗಿತ್ತು. ಶಾಲೆಯಲ್ಲಿ ಬೇರೆ ಬೇರೆ ಕಡೆ ಪೆಂಡಾಲಗಳನ್ನು ಹಾಕಿ ವೇದಿಕೆಗಳನ್ನು ಸಿದ್ಧಪಡಿಸಲಾಗಿತ್ತು. ವಿವಿಧ ಶಾಲೆಗಳಿಂದ ಶಿಕ್ಷಕರು ಮಕ್ಕಳನ್ನು ಕರೆದುಕೊಂಡು ಬಂದಿದ್ದರು. ಶಾಲಾ ಹಂತದಲ್ಲಿ ಪ್ರಥಮ ಸ್ಥಾನ ಪಡೆದ ಶ್ರದ್ಧಾ ಮತ್ತು ಮುಜಾಮಿಲ್‌ರೂ ಬಂದಿದ್ದರು.

"ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗೆ ಎಲ್ಲರಿಗೂ ಸ್ವಾಗತ, ಈಗ ವಿವಿಧ ಸ್ಪರ್ಧೆಗಳು ಆರಂಭವಾಗಲಿವೆ. ಹೆಸರು ಕೊಟ್ಟವರು ತಮ್ಮ ತಮ್ಮ ವೇದಿಕೆಗಳ ಬಳಿಗೆ ಹೋಗಬೇಕು. ವಿದ್ಯಾರ್ಥಿಗಳು ಸೋಲು–ಗೆಲುವು ಎರಡೂ ಸಮನಾಗಿ ತೆಗೆದು ಕೊಳ್ಳಬೇಕು" ಎಂದು ನಿರೂಪಕರು ಮೈಕ್‌ನಲ್ಲಿ ಕೂಗಿದರು.

"ಮುಜಾಮಿಲ್... ನೀನು ಚಿತ್ರಕಲಾ ಸ್ಪರ್ಧೆಯ ವೇದಿಕೆಗೆ ಹೋಗು, ನಾನು ಗಾಯನ ಸ್ಪರ್ಧೆ ವೇದಿಕೆಗೆ ಶ್ರದ್ಧಾಳನ್ನು ಕರೆದುಕೊಂಡು ಹೋಗುತ್ತೇನೆ. ಮಧ್ಯಾಹ್ನ ಊಟಕ್ಕೆ ಎಲ್ಲರೂ ಸೇರೋಣ." ಎಂದು ಗುರುಗಳು ಹೇಳಿದರು.

ಅಷ್ಟರಲ್ಲಿ ಗಾಯನ ಸ್ಪರ್ಧೆಗೆ ಶ್ರದ್ಧಾಳ ಹೆಸರನ್ನು ಮೈಕನಲ್ಲಿ ಕೂಗಿದರು. ಶ್ರದ್ಧಾ ಹಾಡು ಹಾಡಲು ವೇದಿಕೆ ಏರಿದಳು.



ಕಾರ್ಯಕ್ರಮದ ಮುಂದುವರೆದ ಭಾಗವನ್ನು ಬರೆ.

_____

_____

_____

_____

_____

_____

@KTBS NOT TO BE REPUBLISHED

10

10.8 ಓದು–ತಿಳಿ–ಬರೆ

ಮುಂದುವರೆದಿದೆ....

3



@KTBS NOT TO BE REPUBLISHED



- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

10

10.9 ಕಥೆ ರಚಿಸು

2T

ಚಿತ್ರ ಸರಣಿಯಲ್ಲಿನ ಘಟನೆಯನ್ನು ನೋಡಿ ಕಥೆ ಬರೆಯೋಣ.








@KTBS NOT TO BE REPUBLISHED


10

10.9 ಕಥೆ ರಚಿಸು

ಮುಂದುವರೆದಿದೆ....

2T







NOT TO BE @KTBS

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

10

10.10 ಉಕ್ತಲೇಖನ ಬರೆ

2T

ಕಥೆ ಓದಿ ಅರ್ಥ ಗ್ರಹಿಸೋಣ ಗೆಳೆಯರೊಡನೆ ಹೇಳೋಣ

ಕರಡಿ ಮತ್ತು ನರಿ ಮಾಡಿದ ಬೇಸಾಯ

ಕರಡಿ ಮತ್ತು ನರಿ ಇಬ್ಬರೂ ಸೇರಿ ಬೇಸಾಯ ಮಾಡಿದವು. ನರಿಯು "ರಾಶಿ ಮಾಡಿದ ಮೇಲೆ ಮೇಲಿನದೆಲ್ಲಾ ನಿನಗೆ ಕೆಳಗಿನದು ನನಗೆ" ಎಂದು ಹೇಳಿತು, ಕರಡಿಯು ಒಪ್ಪಿತು. ಭೂಮಿಯನ್ನು ಹಸನು ಮಾಡಿ ನೆಲಗಡಲೆ ಬಿತ್ತಿದವು. ಫಸಲು ಬಂದ ಮೇಲೆ ರಾಶಿ ಮಾಡಿದವು. ಮಾತಿನಂತೆ ನರಿಯು, ಶೇಂಗಾ ತೆಗೆದುಕೊಂಡು ಸೊಪ್ಪೆಯನ್ನು ಕರಡಿಗೆ ಬಿಟ್ಟಿತು. ಕರಡಿಯು ಸಪ್ಪೆ ಮೊರೆಹಾಕಿತು.



ಮುಂದಿನ ವರ್ಷ ಪುನಃ ಬೇಸಾಯ ಮಾಡಿದವು. ನರಿಯು "ಈ ಸಲ ರಾಶಿ ಮಾಡಿದ ಮೇಲೆ ಮೇಲಿನದೆಲ್ಲಾ ನನಗೆ ಕೆಳಗಿನದು ನಿನಗೆ" ಎಂದು ಸಮಧಾನಪಡಿಸಿತು. ಕರಡಿಯು ಒಪ್ಪಿತು. ನೆಲವನ್ನು ಹಸನು ಮಾಡಿ ಜೋಳ ಬಿತ್ತಿದವು. ಫಸಲು ಬಂದ ಮೇಲೆ ರಾಶಿ ಮಾಡಿದವು.

© KSTBS NOT TO BE REPUBLISHED

10

10.10 ಉಕ್ತಲೇಖನ ಬರೆ

ಮುಂದುವರೆದಿದೆ....

2T

ಮಾತಿನಂತೆ ನರಿಯು ಜೋಳ ತೆಗೆದುಕೊಂಡು ಜೋಳದ ದಂಟುಗಳನ್ನು ಕರಡಿಗೆ ಬಿಟ್ಟಿತು. ಕರಡಿಯು, ನರಿಯ ಮೋಸ ತಿಳಿದು ಮತ್ತೆ ಸೊಪ್ಪೆ ಮೋರೆ ಹಾಕಿತು.



ಗೆಳೆಯರ ಸಹಾಯ ಪಡೆದು ಖಾಲಿ ಜಾಗದಲ್ಲಿ ಒಂದು ಪ್ಯಾರ ಉಕ್ತಲೇಖನ ಬರೆಯೋಣ.

@KTBS NOT TO BE REPUBLISHED

✦ ನನಗೆ ಅರ್ಥವಾಗಿದೆ	☐
✦ ನನಗೆ ಸಹಾಯ ಬೇಕಿದೆ	☐


ಶಿಕ್ಷಕರ ಸಹಿ :
ದಿನಾಂಕ :

10

10.11 ಕಾಮನ ಬಿಲ್ಲು

3

1. ಈಗಾಗಲೇ ಕಲಿತಿರುವ ಪದಗಳಲ್ಲಿ ಇಷ್ಟವಾದ ಪದಗಳನ್ನು ಇಲ್ಲಿ ಬರೆಯೋಣ.



2. ಪದದೊಳಗಿನ ಅಕ್ಷರಗಳನ್ನು ಬಳಸಿ ಹೊಸ ಪದಗಳನ್ನು ರಚಿಸೋಣ..

ಚಂದನವನ

_____

_____

_____

_____

_____

NOT TO BE REPUBLISHED © KTBS

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

10

10.11 ಕಾಮನ ಬಿಲ್ಲು

ಮುಂದುವರೆದಿದೆ....

3

3. ಕೋಷ್ಟಕದಲ್ಲಿನ ಪದಗಳ ಸಹಾಯದಿಂದ ವಾಕ್ಯಗಳನ್ನು ರಚಿಸೋಣ.

ಅಜಯ್	ಪೇಟೆಯಿಂದ	ಹಣ್ಣನ್ನು	ತಂದಳು.
ಸಿಮ್ರಾನ್		ಬಣ್ಣವನ್ನು	
ಮೇರಿ		ತರಕಾರಿಯನ್ನು	ತಂದನು
ಆದಿನಾಥ್		ಬಟ್ಟೆಯನ್ನು	

@KTBS NOT TO BE REPUBLISHED

- ನನಗೆ ಅರ್ಥವಾಗಿದೆ ☐
- ನನಗೆ ಸಹಾಯ ಬೇಕಿದೆ ☐

ಶಿಕ್ಷಕರ ಸಹಿ :

ದಿನಾಂಕ :

10

10.12 ದಾರಿ ತೋರಿಸು

3

ಗೆರೆ ಎಳೆದು ಅವರವರ ಮನೆಗೆ ತಲುಪಿಸೋಣ.











ಸೂಚನೆ: ಚಿತ್ರದಲ್ಲಿ ಏನೇನು ಕಾಣುತ್ತಿವೆ ಎಂದು ಪಟ್ಟಿ ಮಾಡೋಣ, ಅವುಗಳನ್ನು ಕುರಿತು ಕೆಲವು ವಾಕ್ಯಗಳನ್ನು ಬರೆಯೋಣ.

_____

_____

_____

✦ ನನಗೆ ಅರ್ಥವಾಗಿದೆ ☐ ✦ ನನಗೆ ಸಹಾಯ ಬೇಕಿದೆ ☐	ಶಿಕ್ಷಕರ ಸಹಿ : ದಿನಾಂಕ :

NOT TO BE REPUBLISHED

10



10.12 ನನ್ನ ಇಷ್ಟದ ಬರಹ

3

ನಿನ್ನ ಇಷ್ಟದ ಯಾವುದಾರೂ ಒಂದು ಪದ್ಯ / ಕಥೆ / ಚಿತ್ರ ಕಥಾ ಸರಣಿಯನ್ನು ಇಲ್ಲಿ ಬರೆ.

@KTBS
NOT TO BE REPUBLISHED

ಮೌಲ್ಯಾಂಕನ – ಸೂಚಿತ ಕಲಿಕಾ ಫಲಗಳು

ಕ್ರ.ಸಂ.	ಮೈಲುಗಲ್ಲು	2 ನೇ ತರಗತಿ– ಕನ್ನಡ ಸೂಚಿತ ಕಲಿಕಾ ಫಲಗಳು ಭಾಗ–2	ಮೌಲ್ಯಾಂಕನ
1	5	ಸೂಕ್ತವಾದ ಸರಳ ಲೇಖನ ಚಿಹ್ನೆಗಳನ್ನು ಬಳಸುವರು. (ಪೂರ್ಣ ವಿರಾಮ, ಪ್ರಶ್ನಾರ್ಥಕ ಚಿಹ್ನೆ)	FA3 (ಡಿಸೆಂಬರ್)
2		ಕಾಲ್ಪನಿಕ ಮತ್ತು ಕಾಲ್ಪನಿಕವಲ್ಲದ(ವಾಸ್ತವಿಕ) ವಿವಿಧ ಪುಸ್ತಕಗಳ ಕುರಿತು ಆಸಕ್ತಿಯನ್ನು ತೋರಿಸುವರು ಮತ್ತು ಓದುವರು.	
3		ಶಾಲಾ ಗ್ರಂಥಾಲಯದಲ್ಲಿನ ಪುಸ್ತಕಗಳನ್ನು ಸರಿಪಡಿಸಿ ಜೋಡಿಸುತ್ತಾರೆ.	
4	6	ಸಣ್ಣ ಸುದ್ದಿ ಮತ್ತು ಪ್ರಚಾರಕರ ಪತ್ರವನ್ನು ಓದುವರು ಮತು ಅದರಲ್ಲಿನ ವಿಷಯವನ್ನು ವಿವರಿಸುವರು.	
5	7	ಪಠ್ಯದಲ್ಲಿನ ಅಪರಿಚಿತ ಪದಗಳ ಅರ್ಥವನ್ನು ಗುರುತಿಸಲು ಮಕ್ಕಳ ಶಬ್ದಕೋಶವನ್ನು ಬಳಸುವರು.	FA4 (ಪೆಬ್ರವರಿ)
6		ಕಿರು ಪದ್ಯ / ಪ್ರಾಸಗೀತೆಗಳನ್ನು ತಮ್ಮದೇ ಪದಗಳನ್ನು ಬಳಸಿ ಸ್ವತಂತ್ರವಾಗಿರಚಿಸುವರು.	
7	8	ದೃಶ್ಯ ವಿಷಯಕ್ಕಿಂತ ಹೆಚ್ಚು ಪಠ್ಯ ವಿಷಯದ ಪುಸ್ತಕಗಳನ್ನು ಸ್ವತಂತ್ರವಾಗಿಓದಲು ಪ್ರಾರಂಭಿಸುವರು.	
8		ಕಥೆಯಲ್ಲಿನ ಪಾತ್ರ., ಕಥಾವಸ್ತು, ಅನುಕ್ರಮಣಿಕೆ ಮತ್ತು ಲೇಖಕರ ದೃಷ್ಟಿಕೋನವನ್ನು ಓದಿ ಗುರುತಿಸುವರು.	
9	9	ಸಂಕೀರ್ಣಕಥಾಹಂದರ ಮತ್ತು ಬಹು ಪಾತ್ರಗಳನ್ನೊಳಗೊಂಡಂತೆ ಸ್ವಂತ ಕಥೆಯನ್ನು ರಚಿಸುವರು.	
10	10	ಸಣ್ಣ ಸಣ್ಣ ವಾಕ್ಯಗಳನ್ನು ಉಕ್ತಲೇಖನದೊಂದಿಗೆ ಬರೆಯುವರು.	SA2 (FA3+ FA4) (ಮಾರ್ಚ್)
11		ಚಿತ್ರಸರಣಿಗಳನ್ನು ರಚಿಸುವರು ಮತ್ತು ಅವುಗಳಿಗೆ ಸಂಬಂಧಿಸಿದಂತೆ ಸಣ್ಣ ವಾಕ್ಯಗಳನ್ನು ನಿಖರವಾಗಿ ಬರೆಯುವರು.	
12		ಚಿತ್ರ ಪುಸ್ತಕದಿಂದ ಕಥೆಯನ್ನು ಊಹಿಸಿ ಬರೆಯುವರು.	
13		ಘಟನೆ ಮತ್ತು ಅನುಭವಗಳಿಗೆ ಸಂಬಂಧಿಸಿದಂತೆ ವಿವರಣೆ ಮತ್ತು ಲೇಖನಗಳನ್ನು ಬರೆಯುವರು.	

© @KTRS NOT TO BE REPUBLISHED